(ಸದನವು 3-30 ಗಂಟೆಗೆ ಸಮಾವೇಶಗೊಂಡಿತು)

(ಮಾನ್ಯ ಸಭಾಧ್ಯಕ್ಷರು ಅಧ್ಯಕ್ಷಪೀಠವನ್ನು ಅಲಂಕರಿಸಿದರು)

ಶಾಸನ ರಚನೆ

ಬಸವ ಕಲ್ಯಾಣ ಅಭಿವೃದ್ಧಿ ಮಂಡಳಿ ವಿಧೇಯಕ 2005

ಪರ್ಯಾಲೋಚನಾ ಪ್ರಸ್ತಾವ

ಶ್ರೀ ಎಂ.ಪಿ. ಪ್ರಕಾಶ್ (ಕಂದಾಯ ಸಚಿವರು) : ಮಾನ್ಯ ಅಧ್ಯಕ್ಷರೆ, ಕರ್ನಾಟಕ ವಿಧಾನಪರಿಷತ್ತಿನಿಂದ ಅಂಗೀಕೃತವಾದ ರೂಪದಲ್ಲಿರುವ 2005ನೇ ಸಾಲಿನ ಬಸವ ಕಲ್ಯಾಣ ಅಭಿವೃದ್ಧಿ ಮಂಡಳಿ ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

ಪ್ರಸ್ತಾವವನ್ನು ಮಂಡಿಸಲಾಯಿತು.

ಶ್ರೀ ಎಂ.ಪಿ. ಪ್ರಕಾಶ್ (ಕಂದಾಯ ಸಚಿವರು) : ಮಾನ್ಯ ಅಧ್ಯಕ್ಷರೆ, ತಮಗೆ ಈಗಾಗಲೇ ಗೊತ್ತಿರುವಂತೆ ಬಸವಕಲ್ಯಾಣ ಅಭಿವೃದ್ಧಿ ಮಂಡಳಿಯ ವಿಧೇಯಕವನ್ನು ವಿಧಾನಪರಿಷತ್ತಿನವರು ಈಗಾಗಲೇ ಒಪ್ಪಿಗೆಯನ್ನು ಕೊಟ್ಟಿದ್ದಾರೆ. 12ನೇ ಶತಮಾನದಲ್ಲಿ ಬಸವಾದಿ ಪ್ರಮುಖರು ಮತ್ತು ಕಾಯಕಜೀವಿಗಳು ನಡೆಸಿದಂತಹ ದೊಡ್ಡ ಹೋರಾಟದ ಪೂರಕವಾಗಿ ಅವರ ಸಂಗಮಸ್ಥಾನ ಕೂಡಲಸಂಗಮವಾಗಿದ್ದರೂ ಕೂಡ ಅವರ ಕರ್ಮ ಭೂಮಿ ಬಸವಕಲ್ಯಾಣವೇ ಆಗಿತ್ತು. ಅಲ್ಲಿ ಕಳಚೂರ್ಯರ ಮತ್ತು ಚಾಲುಕ್ಯರ ದೊಡ್ಡ ಸಾಮ್ರಾಜ್ಯದ ಒಂದು ಪ್ರದೇಶವಾಗಿರುವುದರ ಜೊತೆಗೆ ಮಾಳಕೇಡ ಮತ್ತು ರಾಷ್ಟ್ರಕೂಟರ ಪರಿಸರವು ಕೂಡ ಆ ಪ್ರದೇಶದಲ್ಲಿದ್ದುದರಿಂದ ಅಲ್ಲಿ ಐತಿಹಾಸಿಕವಾದಂತಹ ಕುರುಹುಗಳು ಅಲ್ಲಿಂಯು ಸಾಹಿತ್ಯ ಶಿಲಾಶಾಸನಗಳು, ಸಂಸ್ಥಾನಗಳ ಮೂಲಕವಾದಂತಹ ಸಾಂಸ್ಕೃತಿಕವಾದಂತಹ ಅಧ್ಯಯನ ಮೊದಲಾದಂತಹ ವಿಚಾರಗಳಿಗೆ ಬೀದರ್ ಜಿಲ್ಲೆಯ ಬಸವಕಲ್ಯಾಣ ಬಹಳ ಪ್ರಖ್ಯಾತವಾಗಿರುವಂತಹದ್ದು ಇದೆ, ನಮ್ಮ ಕನ್ನಡ ನಾಡಿನ ಇತಿಹಾಸ ಒಂದೇ ಅಲ್ಲ, ಭಾರತ ದೇಶದ ಇತಿಹಾಸದಲ್ಲಿಯೂ ಕೂಡ ಅತ್ಯಂತ ಮುಖ್ಯವಾದಂತಹ

ಕಾಳಘಟ್ಟವೇ ಬಸವಾದಿ ಪ್ರಮುಖರು ಮಾಡಿದಂತಹ ಒಂದು ದೊಡ್ಡ ಚಳುವಳಿ. ಅಲ್ಲಿ ಒಂದು ಸಮಾನತೆಯ ಬಗ್ಗೆ, ಕಾಯಕದ ಬಗ್ಗೆ, ದಾಸೋಹದ ಪರಿಕಲ್ಪನೆಗಳ ಬಗ್ಗೆ ಬಸವಕಲ್ಯಾಣದಲ್ಲಿ ಕೊಟ್ಟಿರುವಂತಹ ಒಂದು ಕರೆ, ಇವತ್ತಿಗೂ ಕೂಡ ಪ್ರಸ್ತುತವಾಗಿರುವಂತಹದ್ದು ಆಗಿದೆ. ಆ ಕಾರಣಕ್ಕಾಗಿ ಇತ್ತೀಚಿನ ದಿನಮಾನಗಳಲ್ಲಿ ಬಸವ ಕಲ್ಯಾಣ ತನ್ನದೇ ಆದಂತಹ ಅಭಿವೃದ್ಧಿ ಪಥದಲ್ಲಿ ಸಾಗಿದೆ. ಅಲ್ಲಿರುವಂತಹ ಪರಿಸರದ ನೈರ್ಮಲ್ಯವೇ ಆಗಿರಬಹುದು, ಅಥವಾ ಆರ್ಥಿಕವಾದಂತಹ ಅಭಿವೃದ್ಧಿಯ ವಿಚಾರಗಳೇ ಆಗಿರಬಹುದು, ಅಥವಾ ಅಲ್ಲಿ ಒಂದು ಸಾಂಸ್ಕೃತಿಕವಾದಂತಹ ಪುನರುಜ್ಜೀವನ ಮತ್ತು ಸಾಹಿತ್ಯದ ಒಂದು ಪುನರುಜ್ಜೀವನದ ವಿಚಾರಗಳೇ ಆಗಿರಬಹುದು. ಅಲ್ಲಿಯ ಮಠ ಮಾನ್ಯಗಳು ಕೂಡ ಇಂತಹ ವಿಚಾರಗಳ ಬಗ್ಗೆ ಒಂದು ದೊಡ್ಡದಾಗಿರತಕ್ಕಂತಹ ಗಮನಸೆಳೆಯುವಂತಹ ರೀತಿಯಲ್ಲಿ ಕೆಲಸವಾಗಿಲ್ಲ; ಮತ್ತು ಬಸವಕಲ್ಯಾಣದಲ್ಲಿ ಐತಿಹಾಸಿಕವಾದಂತಹ ಕುರುಹುಗಳನ್ನು ನಾಶಮಾಡುವಂತಹ ಭೂಕಬಳಿಕೆ ಮಾಡುವಂತಹ ಈ ಎಲ್ಲಾ ಒಂದು ಕ್ರಮಗಳು ಇರುವುದರಿಂದ ಒಂದು ಬಸವಕಲ್ಯಾಣದ ಅಭಿವೃದ್ಧಿ ಪ್ರಾಧಿಕಾರವನ್ನು ಮಾಡಬೇಕೆಂದು ಹೇಳಿ ಕಳೆದ ಸರ್ಕಾರದಲ್ಲಿ ಈ ನಿರ್ಣಯವನ್ನು ಮಾಡಿದ್ದರು. ಅದಕ್ಕಾಗಿ ಅವತ್ತಿನ ಮುಖ್ಯಮಂತ್ರಿಗಳಾಗಿದ್ದಂತಹ ಮಾನ್ಯ ಕೃಷ್ಣರವರು ಸಹಿತ ಈ ಹೇಳಿಕೆಯನ್ನು ಕೊಟ್ಟಿದ್ದರು. ಆದರೆ ಮುಂದೆ ಚುನಾವಣೆ ಬಂದ ಕಾರಣವೋ, ಮತ್ಯಾವುದೋ ಕಾರಣಕ್ಕಾಗಿ ಅದೊಂದರ ರೂಪಕ್ಕೆ ಬರುವುದಕ್ಕೆ ಸಾಧ್ಯವಾಗಲಿಲ್ಲ. ಆದಾದ ಮೇಲೆ ಈ ಸಮ್ಮಿಶ್ರ ಸರ್ಕಾರ ಈ ವಿಚಾರದಲ್ಲಿ ನಿರ್ಣಯವನ್ನು ತೆಗೆದುಕೊಂಡು ಪ್ರಾಧಿಕಾರವನ್ನು ಮಾಡಿ ಈಗ ಬಸವಕಲ್ಯಾಣವನ್ನು ನಾವು ಅಭಿವೃದ್ಧಿ ಪಡಿಸಬೇಕು. ಕೂಡಲಸಂಗಮದಲ್ಲಿ ಅಭಿವೃದ್ಧಿಯಾದಂತಹ ರೀತಿಯಲ್ಲಿ ಅದರಲ್ಲಿರತಕ್ಕಂತಹ ಆರ್ಥಿಕ, ಸಾಮಾಜಿಕ, ಸಾಂಸ್ಕೃತಿಕ ವಲಯಗಳಲ್ಲಿ ಬೇಕಾಗಿರ ತಕ್ಕಂತಹ ಒತ್ತನ್ನು ಕೊಟ್ಟು ಒಂದು ಅಭಿವೃದ್ಧಿ ಶೀಲವಾದಂತಹ ಪ್ರದೇಶವನ್ನಾಗಿ ಮಾಡಬೇಕೆಂದು ಹಿರಿಯ ಉದ್ದೇಶದ ಮೂಲಕವಾಗಿ ನಾವು ಮಾನ್ಯ ಮುಖ್ಯಮಂತ್ರಿಗಳು ಹಾಗೂ ಉಪಮುಖ್ಯಮಂತ್ರಿಗಳು ಈ ವಿಚಾರದ ಬಗ್ಗೆ ಪ್ರಸ್ತಾಪ ಮಾಡಿದ ಮೇಲೆ ಅದಕ್ಕೆ ಕಳೆದ ಬಾರಿಯೇ 2 ಕೋಟಿ ರೂಪಾಯಿಗಳನ್ನು ಆಯವ್ಯಯದಲ್ಲಿ ಇದಕ್ಕಾಗಿಯೇ ತೆಗೆದಿಟ್ಟಿದ್ದರು. ಆದರೆ ಆ ಒಂದು ವಿಧೇಯಕವನ್ನು ತರಬೇಕೆನ್ನುವಂತಹ ಸಂದರ್ಭದಲ್ಲಿಯೇ ನಮ್ಮ ಗ್ರಾಮಪಂಚಾಯಿತಿಯ ಚುನಾವಣೆಗಳು ಬಂದವು. ಅದಕ್ಕಿಂತ ಪೂರ್ವದಲ್ಲಿ ಒಂದು ಅಧ್ಯಾಪನಾವನ್ನು ಹೊರಡಿಸಬೇಕೆಂಬ ಅನಿವಾರ್ಯತೆ ಬಂತು. ಮಧ್ಯದಲ್ಲಿ ಬೀದರ್ ಉಪಚುನಾವಣೆಯಾದ

ಕಾರಣಕ್ಕಾಗಿಯೇ ನಮ್ಮ ವಿಧೇಯಕವನ್ನು ಎರಡು ಸದನಗಳಲ್ಲಿ ಮಂಡಿಸಿ ಅದನ್ನು ಅಂಗೀಕರಿಸುವುದಕ್ಕೆ ಸಾಧ್ಯವಾಗಲಿಲ್ಲ. ಅದನ್ನು ಅಂಗೀಕರಿಸುವುದರಲ್ಲಿ ಆಗದೆ ಇರುವುದಕ್ಕಾಗಿ ಉಪಚುನಾವಣೆ ಅದನಂತರ ಸದನ ಸೇರಿಲ್ಲವೆನ್ನುವಂತಹ ಕಾರಣಕ್ಕಾಗಿಯೇ ನಾವು ಅಧ್ಯಾಪನವನ್ನು ತಂದೆವು. ಅದನ್ನು ತಂದೆ ಮೇಲೆ ಅಧಿವೇಶನ ಬಂತು ಅದರ ಬಗ್ಗೆ ವಿಧಾನಪರಿಷತ್ತಿನಲ್ಲಿ ಆ ವಿಚಾರವನ್ನು ಪ್ರಸ್ತಾಪ ಮಾಡಿ ಅಂಗೀಕಾರವನ್ನು ಪಡೆದುಕೊಂಡೆವು. ಕೆಳಮನೆಯಲ್ಲಿ ಬಂದು ಅಂಗೀಕಾರ ಪಡೆಯಬೇಕೆನ್ನುವಷ್ಟರಲ್ಲಿ ಬೇರೆ ಬೇರೆ ಪ್ರಸ್ತುತ ಅನೇಕ ವಿಚಾರಗಳು ಬಂದುದರಿಂದ ಇಲ್ಲಿ ಸಮಯದ ಅಭಾವದ ಕಾರಣಕ್ಕಾಗಿ ಆ ವಿಧೇಯಕವನ್ನು ಮಂಡಿಸುವುದಕ್ಕೆ ಸಾಧ್ಯವಾಗಲಿಲ್ಲ. ಈಗ ವಿಧೇಯಕವನ್ನು ಪರಿಷತ್ತಿನಲ್ಲಿ ಅಂಗೀಕಾರದಂತಹ ರೂಪದಲ್ಲಿ ಮಾಡಿದ್ದೇವೆ. ಇದರ ಎಲ್ಲಾ ವಿವರಗಳು ಕೂಡ ಸನ್ಮಾನ್ಯ ಎಲ್ಲಾ ಸದಸ್ಯರ ಗಮನದಲ್ಲಿಯೂ ಕೂಡ ಇರತಕ್ಕಂತಹದ್ದು ಇದೆ. ಈ ವರ್ಷದಲ್ಲಿ ಸನ್ಮಾನ್ಯ ಉಪಮುಖ್ಯಮಂತ್ರಿಗಳು ಹಣಕಾಸಿನ ಮಂತ್ರಿಗಳು ಈ ಪ್ರಾಧಿಕಾರವನ್ನು ಚೆನ್ನಾಗಿ ಕೆಲಸ ಮಾಡುವ ಕಾರಣಕ್ಕಾಗಿಯೇ ಆಯವ್ಯಯದಲ್ಲಿ 5 ಕೋಟಿ ರೂಪಾಯಿಗಳನ್ನು ಇದಕ್ಕಾಗಿ ಕೊಟ್ಟಿದ್ದಾರೆ. ಇಲ್ಲಿ ಪೂರ್ವಭಾವಿಯಾಗಿರತಕ್ಕಂತಹ ಕ್ರಮಗಳನ್ನು ನಾವು ಕೈಗೊಳ್ಳಬೇಕಾಗಿರುವಂತಹ ಕಾರಣವಿರುವುದರಿಂದ ಈ ಸಂಪೂರ್ಣ ನಿಯಂತ್ರಣ ಮತ್ತು ಆಡಳಿತ ವ್ಯವಸ್ಥೆ, ಮೇಲ್ವಿಚಾರಣೆ ಇವೆಲ್ಲವೂ ಮಾಡಬೇಕಾಗಿರುವಂತಹ ಕಾರಣವಿರುವುದರಿಂದ ಇದಕ್ಕೆ ಎಲ್ಲರೂ ಕೂಡ ಒಪ್ಪಿದ್ದೀರಿ. ಕಾನೂನಿನ ಮೂಲಕ ಒಂದು ಮಂಡಳಿಯನ್ನು ರಚಿಸಿ ಅವಶ್ಯಕರೆಂದು ಪರಿಗಣಿಸಿ ಈ ಒಂದು ವಿಧೇಯಕವನ್ನು ತಂದಿದ್ದೇವೆ. ಇದಕ್ಕಾಗಿ ಸಿಬ್ಬಂದಿ ಮೊದಲಾಗಿರುವಂತಹ ನೇಮಕಾತಿಗಳನ್ನು ಕೂಡ ಮಾಡಬೇಕಾಗಿದೆ. ವಿಷಯವು ಬಹಳ ತುರ್ತು ಸ್ವರೂಪದ್ದಾಗಿರುವುದರಿಂದ ಇಲ್ಲಿ ಆಯವ್ಯಯದಲ್ಲಿ ಬಂದಿರುವಂತಹ ಹಣವನ್ನು ನಾವು ಬಳಸಬೇಕಾಗಿರುವಂತಹ ಕಾರಣ ಇರುವುದರಿಂದ ನಾನು ಅನುಸೂಚನೆ-2 ರಲ್ಲಿ ಯಾವ ಯಾವ ಪ್ರದೇಶಗಳು ಈ ಬಸವಕಲ್ಯಾಣದ ಪರಂಪರೆಯ ತಾಣಗಳಾಗಿವೆ, ಸ್ಮಾರಕಗಳಾಗಿವೆ ಕೂಡ ಕೊಟ್ಟಿದ್ದೇನೆ. ಕೋಟೆ, ಪರುಷಕಟ್ಟೆ, ಬಸವೇಶ್ವರಗುಡಿ, ಕಿನ್ನರ ಬೊಮ್ಮಯ್ಯನ ಗವಿ, ಮೋಳಿಗೆಯ ಮಾರಯ್ಯನ ಗುಡಿ, ದೇವರದಾಸಿಮಯ್ಯ: ಜೇಡರ ದಾಸಿಮಯ್ಯನ ಗವಿಗಳು, ಸದಾನಂದ ಮಠ, ಬಸವಭವನ, ಹರಳಯ್ಯನಗವಿ, ಈ ತರಹ ಅಲ್ಲಿರುವಂತಹ ತ್ರಿಪುರಾಂತಕ ಕೆರೆ ನಿಜವಾಗಿಯೂ ಕೂಡ ಬಹಳ ವೈಭವಯುತವಾಗಿರುವಂತಹ ಒಂದು ವಾಟರ್ ಬಾಡಿಯಾಗಿರುತ್ತದೆ. ತ್ರಿಪುರಾಂತಕ ಕೆರೆಯನ್ನು ಕೂಡ ಅಭಿವೃದ್ಧಿ ಮಾಡಬೇಕಾಗಿದೆ. ಯಾವುದೇ ಸಂದರ್ಭದಲ್ಲಿ ಈ ವಿಧೇಯದ

ಮೂಲಕವಾಗಿ ಅಲ್ಲಿ ಇರತಕ್ಕಂತಹ ಕೆಲವು ದೇವಸ್ಥಾನಗಳು ಅಥವಾ ಸೂಜಿತವಾಗಿರುವಂತಹ ಸ್ಮಾರಕಗಳು ಅಥವಾ ಕೇಂದ್ರ ಸರ್ಕಾರದ ಪುರಾತತ್ವ ಇಲಾಖೆಗೆ ಸೇರಿರುವಂತಹ ಸ್ಮಾರಕಗಳನ್ನು ಅವರ ಅಧಿಕಾರದ ವ್ಯಾಪ್ತಿಯನ್ನು ನಾವು ಮುಟ್ಟುವುದಿಲ್ಲ. ಅದರೆ ಉಳಿದಿರುವಂತಹ ಪ್ರದೇಶಗಳನ್ನು ನಾವು ಅಭಿವೃದ್ಧಿಪಡಿಸುವುದಕ್ಕೆ ಬೇಕಾಗಿರುವಂತಹ ಯಾರು ಯಾರು ಸದಸ್ಯರು ಇರಬೇಕೆಂಬುದರ ಬಗ್ಗೆಯೂ ಕೂಡ ಇದರಲ್ಲಿ ಸೇರಿಸಿದ್ದೇವೆ. ಈ ವಿಚಾರದಲ್ಲಿ ಇಡೀ ಕರ್ನಾಟಕದ ಜನತೆ ಒಪ್ಪಿಕೊಟ್ಟಿರುವುದನ್ನು ಕಂಡಿದ್ದೇವೆ. ಮೇಲ್ಮನೆಯಲ್ಲಿ ಇದಕ್ಕೆ ಸರ್ವಾನುಮತದ ಬೆಂಬಲವನ್ನು ಕೊಟ್ಟಿದ್ದಾರೆ. ಆದ್ದರಿಂದ ತಮ್ಮ ಮೂಲಕವಾಗಿ ಕೆಳಮನೆಯಲ್ಲಿರುವಂತಹ ಎಲ್ಲಾ ಗೌರವಾನ್ವಿತ ಸದಸ್ಯರುಗಳನ್ನು ಈ ಒಂದು ಅತ್ಯಂತ ಮಹತ್ವದ ಮತ್ತು ಅಗತ್ಯವಾಗಿ ಆಗಲೇಬೇಕಾಗಿರುವಂತಹ ಬಸವಕಲ್ಯಾಣದ ಅಭಿವೃದ್ಧಿಗೆ ತಾವು ಈ ವಿಧೇಯವನ್ನು ಒಪ್ಪಿಗೆ ಕೊಡಬೇಕೆಂದು ಹೇಳುತ್ತಾ ತಮ್ಮ ಮೂಲಕ ಪ್ರಾರ್ಥನೆಯನ್ನು ಮಾಡಿಕೊಳ್ಳುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ (ವಿರೋಧಪಕ್ಷದ ನಾಯಕರು) : ಮಾನ್ಯ ಅಧ್ಯಕ್ಷರೆ, ಮೇಲ್ಮನೆಯಲ್ಲಿ ಈಗಾಗಲೇ ಅಂಗೀಕಾರವಾಗಿ ಬಂದಿರುವಂತಹ ಈ ಬಸವಕಲ್ಯಾಣ ಅಭಿವೃದ್ಧಿ ಮಂಡಳಿ ವಿಧೇಯಕವನ್ನು ತಂದಿದ್ದಾರೆ ಇದನ್ನು ನಾನು ಸ್ವಾಗತ ಮಾಡುತ್ತೇನೆ. ಬಹಳ ವರ್ಷಗಳಿಂದ ಈ ಒಂದು ಬಸವಕಲ್ಯಾಣ ಅಭಿವೃದ್ಧಿ ಮಂಡಳಿ ಅಗಬೇಕೆನ್ನುವಂತಹ ಆಗ್ರಹ ನಾವು ಮಾಡಿಕೊಂಡು ಬರುತ್ತಿದ್ದೇವೆ. ಹಿಂದೆ ಕೂಡಲಸಂಗಮದಲ್ಲಿ ಇದೇ ರೀತಿಯಾಗಿ ಒಂದು ಮಂಡಳಿಯನ್ನು ರಚನೆ ಮಾಡಿ ಬಹುಶಃ ನಮ್ಮ ದೇಶದ ಜನರನ್ನು ಆಕರ್ಷಕ ಮಾಡುವಂತಹ ರೀತಿಯಲ್ಲಿ ಬಹಳ ಒಳ್ಳೆಯ ರೀತಿಯಲ್ಲಿ ಕೂಡಲ ಸಂಗಮ ಅಭಿವೃದ್ಧಿಯಾಗಿರುವುದು ಬಹುಶಃ ಆ ಒಂದು ಸಂದರ್ಭದಲ್ಲಿ ತೆಗೆದುಕೊಂಡಂತಹ ತೀರ್ಮಾನ ದಿವಂಗತ ಶ್ರೀ ಜೆ.ಹೆಚ್. ಪಟೇಲ್‌ರವರಿಗೆ ಹಾಗೂ ಆ ಅಧಿಕಾರಿಗಳು ಯಾರು ಕೆಲಸವನ್ನು ಮಾಡಿದ್ದಾರೆ ಅವರಿಗೆ ಗೌರವ ಸಲ್ಲಬೇಕು ವಿಶೇಷವಾಗಿ ಜಮೀನುದಾರರವರು ಆ ಸಂದರ್ಭದಲ್ಲಿ ಆ ಕೂಡಲಸಂಗಮದಲ್ಲಿ ಅದರ ಅಭಿವೃದ್ಧಿಗಾಗಿ ವಿಶೇಷ ಪರಿಶ್ರಮವನ್ನು ಹಾಕಿದರು. ಅವರಿಗೆ ಅಭಿನಂದನೆಯನ್ನು ಸಲ್ಲಿಸುವುದು ನನ್ನ ಕರ್ತವ್ಯವೆಂದು ತಿಳಿದುಕೊಂಡಿದ್ದೇನೆ. ನಾನು ಸರ್ಕಾರವನ್ನು ವಿನಂತಿ ಮಾಡುವುದೇನೆಂದರೆ, ಯಾವುದೇ ಕಾರಣಕ್ಕಾಗಿ ಬಸವಕಲ್ಯಾಣ ಅಭಿವೃದ್ಧಿ ಈ ಮಂಡಳಿಯ ಕೆಲಸ ಈಗ ತಾತ್ಕಾಲಿಕವಾಗಿ 5 ಕೋಟಿ ರೂಪಾಯಿಗಳನ್ನು ಪ್ರಾವಿಜನ್ ಮಾಡಿದ್ದರೂ ಸಹ ಕೂಡಲಸಂಗಮದಂತೆಯೇ

ಅದು ಅಭಿವೃದ್ಧಿಯಾಗಬೇಕು. ಅದಕ್ಕೆ ವರ್ಷವರ್ಷ ಹಣವನ್ನು ಕೊಟ್ಟು ಹಣಕಾಸಿನ ಸಚಿವರು ಇದ್ದಾರೆ, ಇಡೀ ನಾಡಿನ ಜನರು ನೆನಪು ಮಾಡಿಕೊಳ್ಳುವಂತಹ ರೀತಿಯಲ್ಲಿ ಅದು ಅಭಿವೃದ್ಧಿಯಾಗುವ ಬಗ್ಗೆ ಪ್ರಯತ್ನವನ್ನು ಮಾಡಬೇಕೆಂಬ ಬಗ್ಗೆ ನಾನು ಹೇಳುವುದಕ್ಕೆ ಇಚ್ಛೆ ಪಡುತ್ತೇನೆ. ಒಂದು ರೀತಿಯಲ್ಲಿ 12ನೆ ಶತಮಾನ ಆ ಸಮಾನತೆಯ ಶತಮಾನ ಅದರ ಬಗ್ಗೆ ಚರ್ಚೆ ಮಾಡುವುದಕ್ಕೆ ಹೊರಟರೆ ದಿವಸ ಎಲ್ಲವೂ ಚರ್ಚೆ ಮಾಡಬಹುದು. ಅದರೆ ಇವತ್ತು ಇಡೀ ದೇಶಾದ್ಯಂತ ಬರುವಂತಹ ಪ್ರವಾಸೋದ್ಯಮಿಗಳಿಗೆ ಕರ್ನಾಟಕಕ್ಕೆ ಬಂದಾಗ ಆ ಕೂಡಲಸಂಗಮಕ್ಕೆ ಮತ್ತು ಬಸವಕಲ್ಯಾಣಕ್ಕೆ ಹೋಗಿ ಬರಲೆಬೇಕೆನ್ನುವಂತಹ ರೀತಿಯಲ್ಲಿ ಚರಿತ್ರಾರ್ಹ ಸ್ಥಳ ಆ ರೀತಿ ಜನರಲ್ಲಿ ಭಾವನೆ ಬರುವ ರೀತಿಯಲ್ಲಿ ಮಾಡಬೇಕೆಂಬುದು ನಮ್ಮೆಲ್ಲರ ಅಪೇಕ್ಷೆ ಇದೆ ಎಂದು ನಾನು ತಿಳಿದುಕೊಂಡಿದ್ದೇನೆ. ಅಲ್ಲಿ ಬಹಳಷ್ಟು ಇದರ ಬಗ್ಗೆ ಚಿಂತನೆಯನ್ನು ಮಾಡಿ ಈ ಬಸವಕಲ್ಯಾಣ ಉತ್ಸವ ತುಂಬಾ ವಿಜೃಂಭಣೆಯಿಂದ ನಡೆಯಬೇಕು. ಶರಣಸಾಹಿತ್ಯೋತ್ಸವ ಅಲ್ಲಿ ಚೆನ್ನಾಗಿ ನಡೆಯಬೇಕು. ಅಕ್ಕಮಹಾದೇವಿ ಬಸವಣ್ಣನವರ ಆ ಒಂದು ವಿಚಾರಗಳಿಗೆ ಮನ್ನಣೆ ಸಿಗಬೇಕು. ಕಲಾಪ್ರದರ್ಶನಗಳು ನಡೆಯಬೇಕು, ಸಮ್ಮೇಳನಗಳು ಮತ್ತು ವಿಚಾರಗೋಷ್ಠಿಗಳು ಆಗಬೇಕು. ವಾರ್ಷಿಕ ಜಾತ್ರೆಗಳು ವಿಶೇಷ ಸ್ವರೂಪದ ಹಬ್ಬಗಳು ಅಲ್ಲಿ ಆಗಬೇಕು. ಹೀಗೆ ಈ ರಾಜ್ಯದ ಜನರನ್ನು ಹೊರದೇಶದಿಂದ ಬಂದವರನ್ನು ಆಕರ್ಷಣೆ ಮಾಡುವಂತಹ ಒಂದು ಒಳ್ಳೆಯ ಕೇಂದ್ರ ಅದು ಆಗಬೇಕೆಂಬ ಸದುದ್ದೇಶದಿಂದ ಬಹಳ ವರ್ಷಗಳ ಆ ಭಾಗದ ಇಡೀ ನಾಡಿನ ಜನರ ಅಪೇಕ್ಷೆಯನ್ನು ಪೂರೈಸುವಂತಹ ಒಂದು ಪ್ರಯತ್ನ ಇದು ಆಗಿದೆ ಎಂದು ಹೇಳುತ್ತೇನೆ. ನಾನು ಈ ಒಂದು ಬಸವ ಕಲ್ಯಾಣ ಅಭಿವೃದ್ಧಿ ಮಂಡಳಿ ವಿಧೇಯಕವನ್ನು ಸ್ವಾಗತ ಮಾಡಿ. ಯಾವ ಉದ್ದೇಶವನ್ನು ಇಟ್ಟುಕೊಂಡು ಈ ವಿಧೇಯಕವನ್ನು ನೀವು ತಂದಿದ್ದೀರಿ. ಇದನ್ನು ಪ್ರಾರಂಭದಲ್ಲಿ ಇದರ ಬಗ್ಗೆ ಆಸಕ್ತಿಯನ್ನು ತೋರಿ ನಂತರ ಹಣಕಾಸಿನ ಕೊರತೆ ಮತ್ತೊಂದು ಕೊರತೆಯನ್ನು ಹೇಳಿದೇನೆ, ಅದರ ಸರ್ವಾಂಗೀಣ ಅಭಿವೃದ್ಧಿಗೆ ಸರ್ಕಾರ ವಿಶೇಷವಾದಂತಹ ಗಮನವನ್ನು ಕೊಡಬೇಕೆಂಬ ಒತ್ತಾಯ ಮಾಡುತ್ತಾ, ಈ ವಿಧೇಯಕವನ್ನು ಸ್ವಾಗತ ಮಾಡಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಗೋವಿಂದ ಎಂ. ಕಾರಜೋಳ : ಬಸವ ಕಲ್ಯಾಣ ಅಭಿವೃದ್ಧಿ ಮಂಡಳಿ ವಿಧೇಯಕವನ್ನು ನಾನು ಕೂಡ ಸ್ವಾಗತಿಸುತ್ತೇನೆ; ಆದರೆ ಈ ವಿಧೇಯಕದಲ್ಲಿ ಕೆಲವು ಮಾರ್ಪಾಡುಗಳನ್ನು ನಾನು ಬಯಸಿ ಎರಡು ಮಾತುಗಳನ್ನು ನಾನು ಹೇಳಬಯಸುತ್ತೇನೆ.

ಹನ್ನೆರಡನೇ ಶತಮಾನದಲ್ಲಿ ಬಸವಣ್ಣನವರು ಯಾವ ಉದ್ದೇಶಕ್ಕಾಗಿ ಕ್ರಾಂತಿಯನ್ನು ಮಾಡಿದರು. ಯಾವ ಉದ್ದೇಶದ ಹಿನ್ನೆಲೆಯಲ್ಲಿ ಈ ಹಿಂದುಳಿದ ವರ್ಗಕ್ಕೆ ಸೇರಿದಂತಹ ದಲಿತ ವರ್ಗಕ್ಕೆ ಸೇರಿದಂತಹವರನ್ನು ಮತ್ತು ಅಸ್ಪೃಶ್ಯರನ್ನು ತಮ್ಮ ಜೊತೆಯಲ್ಲಿ ತೆಗೆದುಕೊಂಡು ಹೋಗಿ ಅವರಿಗೂ ಕೂಡ ಒಂದು ಸ್ಥಾನಮಾನವನ್ನು ಕೊಟ್ಟು ಕಲ್ಯಾಣದ ಕ್ರಾಂತಿಯನ್ನು ಮಾಡಿದರು. ಸಾಮಾಜಿಕವಾಗಿ ಬದಲಾವಣೆ ತರಲಿಕ್ಕೆ ಪ್ರಯತ್ನವನ್ನು ಮಾಡಿದರು. ಆ ಉದ್ದೇಶ ಈಡೇರಬೇಕಾದರೆ ಈ ಬಿಲ್ಲಿನಲ್ಲಿರತಕ್ಕಂತಹ ಕೆಲವು ಬದಲಾವಣೆಗಳನ್ನು ಈ ಸಂದರ್ಭದಲ್ಲಿ ಹೇಳಲಿಕ್ಕೆ ಬಯಸುತ್ತೇನೆ. ಬಸವಣ್ಣನವರ ಜೊತೆಯಲ್ಲಿ ಈ ದಲಿತ ವರ್ಗಕ್ಕೆ ಸೇರಿದಂತಹ, ಶೋಷಿತವರ್ಗಕ್ಕೆ ಸೇರಿದಂತಹ ಕೆಲವು ಶಿವಶರಣರೂ ಸಹ ಇದ್ದರು. ನೂಲಿ ಚೆಂದಯ್ಯನವರು, ಸೊನ್ನಲಿಗೆ ಸಿದ್ದರಾಮ, ಮಾದಾರ ಚೆನ್ನಯ್ಯ, ಡೋಗರ ಕಕ್ಕಯ್ಯ, ಹಡಪದ ಹಪ್ಪಣ್ಣ, ಮಡಿವಾಳ ಮಾಚಯ್ಯನವರು ಇನ್ನೂ ಅನೇಕ ಶಿವಶರಣರು ಅವರ ಜೊತೆಯಲ್ಲಿದ್ದರು. ಅವರನ್ನೆಲ್ಲಾ ಬಹಳ ಮಹತ್ವ ಕೊಟ್ಟು ತಮ್ಮ ಜೊತೆಯಲ್ಲಿ ಬಸವಣ್ಣ ಕರೆದುಕೊಂಡು ಹೋದರು. ಅದರೂ ಕೂಡ ಅವರೊಂದಿಗೆ ಈ ಸಾಮಾಜಿಕ ನ್ಯಾಯಕ್ಕಾಗಿ ತಮ್ಮ ಪ್ರಾಣ ತ್ಯಾಗ ಮಾಡಿದರು. ಆ ಉದ್ದೇಶದಿಂದ ನಾನು ಸರ್ಕಾರಕ್ಕೆ ಒಂದು ಸಲಹೆಯನ್ನು ಕೊಡಲಿಕ್ಕೆ ಇಚ್ಛಿಸುತ್ತೇನೆ. ಈಗ ತಾವು ಆಡಳಿತ ಮಂಡಳಿಗೆ ಕೆಲವು ಸದಸ್ಯರನ್ನು ನೇಮಿಸಬೇಕು ಅಂತ ಹೇಳಿದ್ದೀರಿ, ಅದರಲ್ಲಿ ಪರಿಶಿಷ್ಟ ಜಾತಿ ಜನಾಂಗ, ಹಿಂದುಳಿದ ವರ್ಗದವರನ್ನು ಸದಸ್ಯರನ್ನಾಗಿ ನೇಮಿಸಿದರೆ ಬಸವಣ್ಣನವರ ಉದ್ದೇಶ ಮತ್ತು ಅವರು ಹಾಕಿಕೊಂಡಂತಹ ಕಾರ್ಯಕ್ರಮಕ್ಕೆ ಒಂದು ಮಹತ್ವವನ್ನು ನಾವು ಕೊಟ್ಟಂತಾಗುತ್ತದೆ. ಇಲ್ಲದಿದ್ದರೆ ಅವರಿಗೆ ಅಪಕಾರ ಮಾಡಿದಂತಾಗುತ್ತದೆ ಎನ್ನುವ ಮಾತನ್ನು ನಾನು ಹೇಳುತ್ತೇನೆ. ಇವತ್ತು ಐದು ಮಂದಿ ಸದಸ್ಯರನ್ನು ನೇಮಿಸಲಿಕ್ಕೆ ಒಂದು ಅವಕಾಶವನ್ನು ಮಾಡಿಕೊಟ್ಟಿದ್ದಾರೆ. ಆ ಐದು ಮಂದಿ ಸದಸ್ಯರಲ್ಲಿ ಒಬ್ಬರು ಹಿಂದುಳಿದ ವರ್ಗಕ್ಕೆ ಸೇರಿದವರು. ಒಬ್ಬರು ಅಸ್ಪೃಶ್ಯ ಜನಾಂಗದವರು, ಇನ್ನೊಬ್ಬರು ಸಣ್ಣ ಸಮಾಜಕ್ಕೆ ಸೇರಿದವರು ಯಾರಾದರೂ ಆಗಬಹುದು ಅಂತಹವರನ್ನು ಇದರಲ್ಲಿ ನೇಮಿಸಲಿಕ್ಕೆ ಈ ವಿಧೇಯಕದಲ್ಲಿ ತಿದ್ದುಪಡಿ ಮಾಡಬೇಕೆಂದು ಮಾನ್ಯ ಕಂದಾಯ ಸಚಿವರನ್ನು ವಿನಂತಿಸುತ್ತೇನೆ. ಅದೇ ರೀತಿ ಕೂಡಲಸಂಗಮ ಅಭಿವೃದ್ಧಿ ಪ್ರಾಧಿಕಾರವನ್ನು ಹಿಂದೆ ನಮ್ಮ ಸರ್ಕಾರ ಮಾಡಿತ್ತು. ಅದರಲ್ಲಿಯೂ ಕೂಡ ಈ ವಿಷಯ ಬಿಟ್ಟು ಹೋಗಿರುವುದರಿಂದ ಅದರಲ್ಲಿ ಪರಿಶಿಷ್ಟ ಜಾತಿ ಹಿಂದುಳಿದವರ್ಗದವರು ಆ ಕಾರ್ಯಕ್ರಮದಲ್ಲಿ ಭಾಗವಹಿಸಲಿಕ್ಕೆ, ತಮ್ಮ ಅಭಿಪ್ರಾಯಗಳನ್ನು ಹೇಳಲಿಕ್ಕೆ ಅವಕಾಶ ಸಿಗುತ್ತಿಲ್ಲ. ಅದರಲ್ಲೂ ಕೂಡ ಬದಲಾವಣೆ ಮಾಡಬೇಕು ಎಂದು

ನಾನು ಸರ್ಕಾರಕ್ಕೆ ಒತ್ತಾಯ ಮಾಡುತ್ತೇನೆ. ಇದೊಂದು ಬಹಳ ಮಹತ್ವವಾದ ವಿಧೇಯಕವಾಗಿದ್ದು ಬಹಳ ವರ್ಷಗಳ ಹಿಂದೆಯೇ ಮಂಡನೆ ಆಗಬೇಕಿತ್ತು. ತಡವಾಗಿಯಾದರೂ ಸರ್ಕಾರ ಮಂಡಿಸಿರುವುದಕ್ಕೆ ನಾನು ಸ್ವಾಗತಿಸುತ್ತೇನೆ. ಹಾಗೆಯೇ ಅದಕ್ಕೆ ಸಹಮತವನ್ನು ವ್ಯಕ್ತಮಾಡಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಜೆ.ಸಿ. ಮಾಧುಸ್ವಾಮಿ : ನಾನು ಕೂಡ ಈ ಬಿಲ್ಲನ್ನು ಸ್ವಾಗತಿಸುತ್ತೇನೆ. ಬಸವೇಶ್ವರರ ಜೀವನದ ಬಗ್ಗೆ, ಅವರು ಸಾರಿದ ಶರಣ ಧರ್ಮದ ಬಗ್ಗೆ ನಾಡಿಗೆ ಪರಿಚಯ ಮಾಡಿಕೊಂಡಬೇಕಾದುದು ಕರ್ತವ್ಯವೆಂದು ಒಪ್ಪಿಕೊಂಡು ಒಂದೇ ಒಂದು ಮಾತನ್ನು ಹೇಳಬೇಕಾಗುತ್ತೆ ಈ ಬಿಲ್ಲನ್ನು ವಿಧಾನಸಭೆಯಲ್ಲಿ ಇಂಟ್ರಡ್ಯೂಸ್ ಮಾಡಿ ವಿಧಾನಪರಿಷತ್ತಿನಲ್ಲಿ ಹೋಗಿತ್ತೋ ಅಥವಾ ಅಲ್ಲೇ ನೇರವಾಗಿ ಇಂಟ್ರಡ್ಯೂಸ್ ಅಗಿ ಇಲ್ಲಿಗೆ ಬಂತೋ ಅನ್ನುವುದು ನಮಗೆ ಅರ್ಥವಾಗುತ್ತಿಲ್ಲ. ಆಕಸ್ಮಾತ್ ಅಲ್ಲೆ ಇಂಟ್ರಡ್ಯೂಸ್ ಮಾಡಿ ಪಾಸ್ ಮಾಡಿ ಇಲ್ಲಿಗೆ ತಂದಿದ್ದರೆ ಅಷ್ಟು ಒಳ್ಳೆಯ ಸಂಪ್ರದಾಯ ಅಲ್ಲವೆಂದು ನನ್ನ ಭಾವನೆ. ಇಲ್ಲಿ ಚರ್ಚೆ ಮಾಡಿ ಬಿಲ್ ಅಲ್ಲಿಗೆ ಹೋಗಿ ಅಲ್ಲಿನ ಹಿರಿಯರು, ಮೇಲ್ಮನೆ ಸದಸ್ಯರು ನಮ್ಮ ಮೇಲೆ ಹೆಚ್ಚಿನ ಬೆಳಕನ್ನು ಚೆಲ್ಲವು ಪ್ರಯತ್ನ ಮಾಡಿದ ಮೇಲೆ ನಾವು ಕುಳಿತು ಚರ್ಚೆ ಮಾಡಬಹುದಾಗಿತ್ತು. ಅಲ್ಲಿ ಪಾಸ್ ಅಗಿ ಇಲ್ಲಿ ಬಿಲ್ ತಂದಿರುವುದು ಅಷ್ಟೊಂದು ಸಮಂಜಸವಲ್ಲ. ಸನ್ಮಾನ್ಯ ಸಚಿವರು ಮುಂದೆ ಇದನ್ನು ನೋಡಿಕೊಳ್ಳಬೇಕು. ಇದರಲ್ಲಿ ಪದನಿಮಿತ್ತವಾಗಿ ಸನ್ಮಾನ್ಯ ಮುಖ್ಯಮಂತ್ರಿಗಳನ್ನು ಮಂಡಳಿಯ ಅಧ್ಯಕ್ಷರನ್ನಾಗಿ ಮಾಡಬೇಕೆಂದು ತಾವು ಸೂಚಿಸಿದ್ದೀರಿ. ಒಂದು ಸಲ ಮುಖ್ಯಮಂತ್ರಿಗಳು ಈ ಮಂಡಳಿಯ ಅಧ್ಯಕ್ಷರಾದ ಮೇಲೆ ಏನಾದರೂ ಡಿಸ್‌ಪ್ಯೂಟ್ಸ್‌ಗಳು ಬಂದರೆ, ಮತ್ತೆ ಯಾವುದಾದರೂ ತಕರಾರು ಬಂದರೆ ಸರ್ಕಾರಕ್ಕೆ ಬರಬೇಕು ಎಂದು ಬಿಲ್ಲಿನಲ್ಲಿ ಇಂಟ್ರಡ್ಯೂಸ್ ಮಾಡುವುದು ಮುಖ್ಯಮಂತ್ರಿಗಳ ಹುದ್ದೆಗೆ ಗೌರವ ತರುವಂತಹ ವಸ್ತುವಲ್ಲ. ಇಲ್ಲವೇ ಮುಖ್ಯಮಂತ್ರಿಗಳು ಚೇರ್ ಮಾಡುವುದನ್ನು ತಪ್ಪಿಸಿ. ಇಲ್ಲವೇ ಅಲ್ಲಿ ಒಂದು ಸಲ ತೀರ್ಮಾನವಾಗಿದ್ದನ್ನು ..... ಮುಖ್ಯಮಂತ್ರಿಗಳೇ ಕುಳಿತು ಅಧ್ಯಕ್ಷತೆ ವಹಿಸಿ ತೆಗೆದುಕೊಂಡ ನಿರ್ಧಾರಗಳನ್ನು ನೀವು ಅಪಲೇಟ್ ಅಥಾರಿಟಿಯಾಗಿ ಅಪಲೇಟ್ ಪವರ್ ಕೊಟ್ಟುಬಿಟ್ಟು ಸರ್ಕಾರಕ್ಕೆ ಕಳುಹಿಸಿ ಮತ್ತೆ ಇಲ್ಲಿ ಇತ್ಯರ್ಥ್ಯವಾಗಬೇಕು ಇಷ್ಟು ದಿನಗಳಲ್ಲಿ ಕಳುಹಿಸಬೇಕು ಎಂದೇನು ಪ್ರಾವಿಷನ್‌ಗಳನ್ನು ಮಾಡಿದ್ದೀರಿ ಅದು ಅಷ್ಟೊಂದು ಉಚಿತವಾಗುವುದಿಲ್ಲ. ನನ್ನ ದೃಷ್ಟಿಯಲ್ಲಿ ಮುಖ್ಯಮಂತ್ರಿಗಳು ಇಂತಹ ಸಭೆಗೆ ಅಧ್ಯಕ್ಷತೆ ವಹಿಸುವುದು ಎಕ್ಸ್ ಅಫಿಷಿಯೋ

ಆಗಿರುವುದು ಬೇಕಾಗುವುದಿಲ್ಲ. ಪ್ರತಿ ತಿಂಗಳು ಒಂದು ಸಭೆ ಕರೆಯಬೇಕು ಅಂತ ಹೇಳುತ್ತೀರಿ ... ಯೋಚನೆ ಮಾಡಿ, ನನ್ನದೇನೂ ಇಲ್ಲ, ಆಮೇಲೆ ಅವರು ಕುಳಿತು ನಿರ್ಧಾರ ಮಾಡಬೇಕಾದರೆ ಈ ಕೆಳಗೆ ನಮೂದಿಸಿರುವುದೆಲ್ಲಾ ಬರುತ್ತದೆ ....

ಶ್ರೀ ಎಂ.ಪಿ. ಪ್ರಕಾಶ್ : ತಾವು ಬಹಳ ಮುಖ್ಯವಾದ ಸಮಸ್ಯೆಯನ್ನು ಎತ್ತಿದ್ದೀರಿ. ನಾವು ಕೂಡಲಸಂಗಮ ಪ್ರಾಧಿಕಾರದಲ್ಲಿ ಮುಖ್ಯಮಂತ್ರಿಗಳನ್ನು ಅಧ್ಯಕ್ಷರನ್ನಾಗಿ ಮಾಡಿದ್ದರಿಂದ ಮಾನ್ಯ ವಿರೋಧ ಪಕ್ಷದ ನಾಯಕರಾದ ಯಡಿಯೂರಪ್ಪನವರು ಹೇಳಿದಂತೆ ಸುಮಾರು 44 ಕೋಟಿ ರೂಪಾಯಿಗಳನ್ನು ಕೊಡಲಿಕ್ಕೆ ಸಾಧ್ಯತೆ ಆಯಿತು. ಆ ಕಾರಣದಿಂದ ಮುಖ್ಯಮಂತ್ರಿಗಳ ಸಭೆಗೆ ಘನತೆ ಬರುತ್ತದೆ ಹಾಗೂ ಹಣಕಾಸಿನ ವಿಚಾರದಲ್ಲಿ ಕೊರತೆ ಬಾರದೆ ಅನುಕೂಲಗಳಾಗುತ್ತವೆ ಎನ್ನುವ ಕಾರಣಕ್ಕೆ ಮುಖ್ಯಮಂತ್ರಿಗಳು ಅಧ್ಯಕ್ಷರಾಗಿರುತ್ತಾರೆ. ವರ್ಷಕ್ಕೆ ಎರಡು ಬಾರಿ ಕಲ್ತೇ ತೀರಬೇಕಾಗುತ್ತದೆ. ಉಳಿದಂತೆ ಕನ್ನಡ ಮತ್ತು ಸಂಸ್ಕೃತಿ ಸಚಿವರು, ಕಂದಾಯ ಸಚಿವರು, ಸಂಬಂಧಿಸಿದ ಆ ಭಾಗದ ಶಾಸಕರು, ಸಂಸದರು ಅವರೆಲ್ಲರೂ ಸೇರಬೇಕು. ಬದಲಾವಣೆ ಮಾಡಿದರೆ ಅದಕ್ಕೆ ಘನತೆ ಬರುವುದಿಲ್ಲ.

ಶ್ರೀ ಜೆ.ಸಿ. ಮಾಧುಸ್ವಾಮಿ : ಮುಖ್ಯಮಂತ್ರಿಗಳಿರುವುದಕ್ಕೆ ನಮ್ಮ ತಕರಾರು ಇಲ್ಲ, ಒಂದು ಸಲ ಮುಖ್ಯಮಂತ್ರಿಗಳು ಕುಳಿತು ಚೇರ್ ಮಾಡಿದ ಸಭೆಯ ನಿರ್ಧಾರಗಳನ್ನು ಮತ್ತೆ ಅಪೀಲ್ ಬರುವಂತಹ ಸಮಸ್ಯೆಯನ್ನು ನಿರ್ಮಾಣ ಮಾಡಬೇಡಿ. ಈ ಕೆಳಗಡೆ ಕ್ಲಾಸ್‌ಗಳಲ್ಲಿ ತಾವು ಬರೆದಿದ್ದೀರಿ. ಏನೆಂದರೆ, ಏನಾದರೂ ಆದರೆ ಮತ್ತೆ ಸರ್ಕಾರದ ಮಟ್ಟದಲ್ಲಿ ತೀರ್ಮಾನವಾಗಬೇಕಾಗುತ್ತದೆಂದು ಇದೆ ಅದು ಬೇಕಾಗುವುದಿಲ್ಲ. ಆಮೇಲೆ ಇದೊಂದು ಚಾರಿಟಬಲ್ ಸಂಸ್ಥೆಯಾಗಿ ಕೆಲಸ ಮಾಡಬೇಕಾಗುತ್ತದೆ. ಇಲ್ಲಿ ಬರುವ ಅಧಿಕಾರೇತರ ಸದಸ್ಯರು ಟಿ.ಎ.:ಡಿ.ಎ. ಗಾಗಿ ಬರಬೇಕು ಎಂದು ಪ್ರಾವಿಷನ್ ಮಾಡುವುದು, ತಾವು ಇಲ್ಲಿ ಬರೆದಿದ್ದೀರಿ. ಟಿ.ಎ.:ಡಿ.ಎ. ತೆಗೆದುಕೊಳ್ಳಬಹುದು ಎಂದು ತಾವು ಬರೆದಿದ್ದೀರಿ. ಅವರಿಗೆ ಅರ್ಹತೆ ಕೊಟ್ಟಿದ್ದೀರಿ. ಯಾತಕ್ಕೆ ಬೇಕಾಗುತ್ತದೆ ಅನ್ನುವುದು ಗೊತ್ತಿಲ್ಲ. ವಿಧೇಯಕದ ಅಧ್ಯಾಯ – 11 ರ ಮಂಡಳಿ ಮತ್ತು ಅದರ ಉದ್ಯೋಗಿಗಳು ಇದರಲ್ಲಿ, ಅಂಕಣ 4 ರಲ್ಲಿ ಪದಾವಧಿ ಮತ್ತು ಸೇವಾ ಷರತ್ತುಗಳು ಇದರಲ್ಲಿ (3) ರಲ್ಲಿ ಅಧಿಕಾರೇತರ ಸದಸ್ಯರು ನಿಯಮಿಸಬಹುದಾದಂಥ ಭತ್ಯಗಳನ್ನು ಪಡೆಯತಕ್ಕದ್ದು ಎಂದು ನಮೂದಿಸಿದ್ದೀರಿ. ಇಂತಹ ಕಡೆ ಕೆಲಸ ಮಾಡಲಿಕ್ಕೂ ಟಿ.ಎ. – ಡಿ.ಎ. ಪಡೆಯಲಿಕ್ಕೆ ಬರುವಂತಹವರನ್ನು ಯಾತಕ್ಕೆ ಸದಸ್ಯರನ್ನು ಮಾಡುತ್ತೀರಿ, ಯಾರಾದರೂ ನಾನು ಸೇವೆ ಮಾಡುತ್ತೇನೆಂದು ಬರುವವರಿಗೆ

ಅವಕಾಶ ಕೊಡಬಹುದಲ್ಲವೆ ? ಅದರ ಮೇಲೂ ಅಲ್ಲಿಗೆ ಐದು ಜನ ಅಧಿಕಾರೇತರ ಸದಸ್ಯರನ್ನು ಮಾತ್ರ ನೀವು ನೇಮಿಸಲಿಕ್ಕೆ ಹೋಗಿದ್ದೀರಿ. ಇದು ಚಾರಿಟಬಲ್ ಸಂಸ್ಥೆ ಅಲ್ಲದೆ ಇಲ್ಲಿ ಕಾಂಟ್ರಿಬ್ಯೂಷನ್ಸ್ ಅನ್ನು ತಾವು ನಿರೀಕ್ಷೆ ಮಾಡಿದ್ದೀರಿ. ಅದಕ್ಕೆ ಅವಕಾಶ ನೀಡಿದ್ದೀರಿ. ಹೇಗಾದರೂ ಮಾಡಿ ಹೊರಗಡೆಯಿರುವವರು ಇದಕ್ಕೆ ಹಣ ಕೊಟ್ಟು ಟ್ಯಾಕ್ಸ್ ಎಕ್ಸೆಮ್‌ಷನ್ ಪಡೆಯುವಂತೆ ಮಾಡಬಹುದು. ಸೆಂಟ್ರಲ್ ಟ್ಯಾಕ್ಸ್ .. ಅಂಡರ್ ಸೆಕ್ಷನ್ 80 ಅಥವಾ 81 ಬಿ. ನಲ್ಲಿ ಬರಬಹುದು. ಎಕ್ಸೆಮ್‌ಷನ್ ನೀಡುವ ಬಗ್ಗೆ ಯಾವುದಾದರೂ ಪ್ರಾವಿಷನ್ ಕೆಳಗೆ ನೀಡಿ ಸರ್ಕಾರದಿಂದ ಕೇಂದ್ರ ಸರ್ಕಾರಕ್ಕೆ ಮೂವ್ ಮಾಡಿ, ಹೊರಗಡೆಯಿಂದ ಯಾರಾದರೂ ದಾನ, ದತ್ತಿ ಕೊಡುವುದನ್ನು ನಿರೀಕ್ಷೆ ಮಾಡಿ ತೆಗೆದುಕೊಂಡರೆ ನಿಜವಾಗಿಯೂ ಒಳ್ಳೆಯದಾಗುತ್ತದೆ. ಅದೊಂದು ಪ್ರಾವಿಷನ್ ಅನ್ನು ತಾವು ಈಗಲೇ ಮಾಡಿಕೊಳ್ಳಬೇಕಾಗುತ್ತದೆ. ಯಾರಾದರೂ ಈ ಕೆಲಸಕ್ಕೆ ದಾನ, ದತ್ತಿ, ಧರ್ಮಕ್ಕೆ ಹಣ ಕೊಟ್ಟರೆ ಅವರಿಗೆ ಇಂತಹ ತೆರಿಗೆಗಳಿಂದ ವಿನಾಯಿತಿ ಕೊಟ್ಟರೆ ಇದಕ್ಕೆ ಸ್ವಲ್ಪ ಮಟ್ಟಿಗೆ ಹೆಚ್ಚಿನ ಹಣವನ್ನು ಕ್ರೋಢೀಕರಿಸಲಿಕ್ಕೆ ನಿಮಗೆ ಅನುಕೂಲ ಆಗುತ್ತದೆ. ಮತ್ತೆ ಕಮಿಷನರ್ ಹುದ್ದೆಯನ್ನು ನೀವು ರೆಕ್ರೂಟ್ ಮಾಡುತ್ತೀರಾ ? ಅಥವಾ ಡೆಪ್ಯುಟೇಷನ್ ಮಾಡುತ್ತೀರೋ ಹೇಳಿಲ್ಲ. ನೇಮಕ ಮಾಡಬಹುದೆಂದು ಹೇಳಿದ್ದೀರಿ. ಒಂದೇ ಸಲ ನೀವು ಆ ಲೆವಲ್ ಅಧಿಕಾರಿಯನ್ನು ನೀವು ನೇಮಕ ಮಾಡಲಿಕ್ಕೆ ಆಗುವುದಿಲ್ಲ. ಉಪಕಾರ್ಯದರ್ಶಿಯವರ ಹುದ್ದೆಗೆ ಕಡಿಮೆಯಿಲ್ಲದ ದರ್ಜೆಯ ಅಧಿಕಾರಿಯನ್ನು ಮಂಡಳಿಯ ಅಯುಕ್ತರನ್ನಾಗಿ ನೇಮಿಸತಕ್ಕದ್ದು ಎಂದು ಹೇಳಿದ್ದೀರಿ. ನೇಮಕ ಮಾಡಿ ಆಕಸ್ಮಾತ್ ಏನಾದರೂ ಹೆಚ್ಚು ಕಡಿಮೆ ಅದರೆ ಆ ಸಮಸ್ಯೆ ದೊಡ್ಡದಾಗಿ ಬಿಡುತ್ತದೆ. ಇದನ್ಯಾಕೆ ಡೆಪ್ಯುಟೇಷನ್ ಮೇಲೆ ಇಡಬಾರದು ಅಂತ ನಾನು ತಮಗೆ ಕೇಳಲಿಕ್ಕೆ ಬಯಸುತ್ತೇನೆ. ಯಾರಾದರೂ ನಿಮ್ಮ ರೆವಿನ್ಯೂ, ಮುಜರಾಯಿ, ಮತ್ತೊಂದು ಇಲಾಖೆಯವರು, ಒಳ್ಳೆಯವರ್‍ಯಾರದರೂ ಇದ್ದರೆ ಅವರನ್ನು ಕೂಡ ಡೆಪ್ಯುಟೇಷನ್ ಮೇಲೆ ಅಲ್ಲಿಡಲಿಕ್ಕೆ ನೀವು ಪ್ರಾವಿಷನ್ ಮಾಡಬಹುದಾಗಿತ್ತು, ಒಂದೇ ಸಲ ಶಾಸನದಲ್ಲಿ ನೇಮಿಸತಕ್ಕದ್ದು ಎಂದು ಹೇಳಿರತಕ್ಕದ್ದು ಎಂದು ಹೇಳಿರುವುದರಿಂದ ನಾಳೆ ಅಲ್ಲಿಗೆ ನೇಮಕವಾದ ಆ ವ್ಯಕ್ತಿ ಶಾಶ್ವತವಾಗಿ ಅಲ್ಲಿ ಉಳಿದುಬಿಡುತ್ತಾನೆ ; ನಿಮಗೆ ಬೇಸರವಾಗಬಹುದೇನೋ ? ಎಲ್ಲಿಗೆ ವರ್ಗಾವಣೆ ಮಾಡುತ್ತೀರಿ, ಈ ಆಕ್ಟ್ ಕೆಳಗಡೆ ನೇಮಕವಾದವರನ್ನು ಎಲ್ಲಿಗೆ ವರ್ಗಾವಣೆ ಮಾಡುತ್ತೀರಿ ಎನ್ನುವುದು ಬೇಕಾಗುತ್ತದೆ.

ಶ್ರೀ ಎಂ.ಪಿ. ಪ್ರಕಾಶ್ : ಕೂಡಲ ಸಂಗಮದಲ್ಲಿ ಒಬ್ಬ ಆಯುಕ್ತರನ್ನು ನೇಮಕಾತಿ ಮಾಡಿದ್ದೇವೆ, ಆ ಆಯುಕ್ತರು ವರ್ಗಾವರ್ಗಿಗೆ ಒಳಪಟ್ಟಂಥವರೇ ಆಗಿರುತ್ತಾರೆ. ಉದಾಹರಣೆಗೆ ಜಾಮದಾರ್‌ರವರು ನಮ್ಮಲ್ಲಿ ಕಾರ್ಯದರ್ಶಿಗಳಾಗಿ ಬಂದಿದ್ದಾರೆ. ಹಾಗೆ ಆಯುಕ್ತರನ್ನು ನೇಮಿಸತಕ್ಕದ್ದು ಅಲ್ಲಿ ನೇಮಕಾತಿ ಮಾಡುತ್ತೇವೆಂದರೆ, ಅವರು ಖಾಯಂ ಆಗಿರತಕ್ಕವರೇನೂ ಅಲ್ಲ. ಆಯುಕ್ತರ ಮಟ್ಟದಲ್ಲಿರುವಂಥ ಒಬ್ಬ ಹಿರಿಯ ಅಧಿಕಾರಿ ಈ ಉಸ್ತುವಾರಿಯ ಜವಾಬ್ದಾರಿಯನ್ನು ನೋಡಿಕೊಳ್ಳುತ್ತಾರೆ.

ಶ್ರೀ ಜೆ.ಸಿ. ಮಾಧುಸ್ವಾಮಿ : ರಾಜ್ಯಸರ್ಕಾರವು ಕಾಲಕಾಲಕ್ಕೆ ನಿರ್ಧರಿಸಬಹುದಾದ ವೇತನ ಮತ್ತು ಇತರ ಭತ್ಯೆಗಳನ್ನು ಆತ ಪಡೆಯತಕ್ಕದ್ದು ಎಂದು ನೀವು ಇಲ್ಲಿ ಹೇಳುತ್ತೀರಿ. ನೀವು ಡೆಪ್ಯುಟೇಷನ್‌ನಲ್ಲಿ ಅಥವಾ ರೆಂಟ್ ಸರ್ವೀಸ್‌ನಲ್ಲಿ ಕಳುಹಿಸುವುದಾದರೆ ಈ ಪ್ರಾವಿಷನ್ ಏನೂ ಬೇಕಾಗಿಲ್ಲ. He is governed by KCSRs. ನಿಮ್ಮ ಆಡಳಿತ ಸೇವೆಯಲ್ಲೇ ಇರುತ್ತಾರೆ, ಅವರು ಕೆಲಸ ಮಾಡಿಕೊಂಡು ಹೋಗುತ್ತಾರೆ. ಇದನ್ನು ಓದಿದವರಿಗೆ ಏನಾಗುತ್ತದೆ ಎಂದರೆ .....

ಶ್ರೀ ಎಂ.ಪಿ. ಪ್ರಕಾಶ್ : ಅದರೆ, ನಿಮಗೆ ಗೊತ್ತಿದ್ದಂತೆ ಪುನರ್ ನಿರ್ಮಾಣ ಮತ್ತು ಪುನರ್ ವಸತಿಗೆ ಸಂಬಂಧಪಟ್ಟಂತೆ ಆರ್ ಅಂಡ್ ಆರ್ ಗೆ ಮಾಡಿದಾಗ, ಆ ಕಮೀಷನರ್ ಮಟ್ಟದಲ್ಲಿರತಕ್ಕ ಅಧಿಕಾರಿ ಸೇವಾ ಜೇಷ್ಠತೆಯಲ್ಲಿ ಇಲ್ಲ ಎನ್ನುವ ಕಾರಣಕ್ಕಾಗಿಯೇ ಬೇರೆ ಒಬ್ಬರನ್ನು ಇವರು ತೆಗೆದುಕೊಂಡು ಹೋಗಿ, ಮಾಡಿದಂಥ ಸಂದರ್ಭ ಇದ್ದುದರಿಂದ ಅಂತಹ ಒಂದು ಎಕ್ಸೆಪ್ಷನ್ ನಮಗೆ ಇರಲಿ ಎಂದು ಹಾಕಿದ್ದೇವೆ.

ಶ್ರೀ ಜೆ.ಸಿ. ಮಾಧುಸ್ವಾಮಿ : ಪುಟ 7 ರಲ್ಲಿ 14 ಮಂಡಳಿಯ ಸಭೆಗಳು ಎನ್ನುವುದರಲ್ಲಿ ಸಬ್ ಸೆಕ್ಷನ್ 4 ಮಂಡಳಿಯ ಯಾವುದೇ ನಿರ್ಣಯವು ಈ ಅಧಿನಿಯಮದ ಅಥವಾ ಯಾವುದೇ ಇತರ ಕಾನೂನಿನ ಉಪಬಂಧವನ್ನು ಅಥವಾ ಈ ಅಧಿನಿಯಮದ ಅಥವಾ ಇತರ ಯಾವುದೇ ಕಾನೂನಿನ ಅಡಿಯಲ್ಲಿ ರಚಿಸಲಾದ ಅಥವಾ ಹೊರಡಿಸಿದ ಯಾವುದೇ ನಿಯಮ ಅಥವಾ ಅಧಿಸೂಚನೆ ಅಥವಾ ವಿನಿಮಯಗಳ ಉಪಬಂಧಗಳನ್ನು ಅಥವಾ ರಾಜ್ಯಸರ್ಕಾರವು ಹೊರಡಿಸಿದ ಯಾವುದೇ ಆದೇಶವನ್ನು ಉಲ್ಲಂಘಿಸುತ್ತದೆಯೆಂದು ಅಥವಾ ಮಂಡಳಿಯ ಹಿತಾಸಕ್ತಿಗೆ ಅಥವಾ ಬಸವಕಲ್ಯಾಣ ಕ್ಷೇತ್ರದ ಅಭಿವೃದ್ಧಿ ಮತ್ತು ನಿರ್ವಹಣೆಗೆ ಧಕ್ಕೆ ಉಂಟು ಮಾಡುತ್ತದೆ ಅಥವಾ ಹಾನಿಕರವಾಗುತ್ತದೆಂದು ಭಾವಿಸಿದರೆ,

ಹದಿನೈದು ದಿವಸದೊಳಗಾಗಿ ಸರ್ಕಾರ ಕೇಳಿ ತಾವು ತಿದ್ದುಪಡಿ ಮಾಡಿಕೊಳ್ಳಬಹುದೆಂದು ಪ್ರಾವಿಷನ್ ಮಾಡಿದ್ದೀರಿ. ಈ ವಿಷಯದ ಬಗ್ಗೆ ಅದೇಶಗಳನ್ನು ಕೋರಿ ರಾಜ್ಯಸರ್ಕಾರಕ್ಕೆ ಕಳುಹಿಸಿಕೊಡತಕ್ಕದ್ದು ಮತ್ತು ಮಂಡಳಿಯ ಮುಂದಿನ ಸಭೆಯಲ್ಲಿ ತಾನು ಕೈಗೊಂಡ ಕ್ರಮದ ಬಗ್ಗೆ ಮಂಡಳಿಗೆ ತಿಳಿಸತಕ್ಕದ್ದು. ಒಬ್ಬ ಚೀಫ್ ಮಿನಿಸ್ಟರೇ ಹೆಡ್ ಮಾಡುವ ಸಭೆಗೆ ಈ ಸ್ಥಿತಿ ನಿರ್ಮಾಣವಾಗುತ್ತದೆಯೇ ಎಂದು ? ಚೀಫ್ ಮಿನಿಸ್ಟರು, ಕನ್ನಡ ಕಲ್ಚರ್ ಸಚಿವರು ಹೀಗೆ ತಾವು ಮಿನಿಸ್ಟರುಗಳನ್ನೇ ಅಲ್ಲಿ ಹಾಕಿದ್ದೀರಿ. ಈಗ ಯಾವುದೋ ಒಂದು ಕೋ ಆಪರೇಟಿವ್ ಸೊಸೈಟಿಯೋ ಅಥವಾ ಯಾವುದೋ ಒಂದು ಸಣ್ಣ ಮಂಡಳಿ ಹೌದು, ಅದು ಹಿತಾಸಕ್ತಿಗೆ ವಿರುದ್ಧವಾಗಿ ಒಂದು ತೀರ್ಮಾನ ತೆಗೆದುಕೊಂಡಿದೆ ಎಂದು ಭಾವಿಸಬಹುದು. ಇಲ್ಲಿ ಸನ್ಮಾನ್ಯ ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ತೆಗೆದುಕೊಂಡ ನಿರ್ಣಯವನ್ನು 15 ದಿವಸದೊಳಗೆ ರಾಜ್ಯಸರ್ಕಾರಕ್ಕೆ ಕಳಹಿಸಬೇಕು, ಅದರ ಅಪ್ರೂವಲ್ ತೆಗೆದುಕೊಂಡು ಇಂಪ್ಲಿಮೆಂಟ್ ಮಾಡಿ ಎನ್ನುವ ಸ್ಥಿತಿಯನ್ನು ಸರಿಯೇ ಇಲ್ಲವೇ ಎನ್ನುವುದನ್ನು ತಮ್ಮ ವಿವೇಚನೆಗೆ ಬಿಡುತ್ತೇನೆ.

ಶ್ರೀ ಎಂ.ಪಿ. ಪ್ರಕಾಶ್ : ಪುಟ 5 ರಲ್ಲಿ 9 ನ್ನೂ ನೋಡಿ.

ಶ್ರೀ ಜೆ.ಸಿ. ಮಾಧುಸ್ವಾಮಿ : ನಾನು ಅದನ್ನೇ ಅಗಲೇ ಹೇಳಿದೆ. ಉಪ ಸಮಿತಿ ತಿಂಗಳಿಗೊಂದು ಸಾರಿಯಾದರೂ ಸೇರಬೇಕು. ಹಾಗಾದರೆ ನೀವು ಇದನ್ನು ಸರ್ಕಾರಕ್ಕೆ ಬಿಟ್ಟು, ಮಂಡಳಿಯ ಸಮಿತಿಗೆ ಎಂದು ಹೇಳಿ. ಇದನ್ನು ಸರ್ಕಾರಕ್ಕೆ ಏಕೆ ತರಿಸಿಕೊಳ್ಳುತ್ತೀರಿ. ಉಪ ಸಮಿತಿ ನಿಮಗೆ ಯಾವುದಾದರೂ ಅಡ್ವರ್ಸ್ ಡಿಸೀಷನ್ ತೆಗೆದುಕೊಂಡರೆ, ಅಲ್ಲಿ ಮುಖ್ಯ ಮಂತ್ರಿಗಳೇ ಹೆಡ್ ಮಾಡುವಂಥ ಸಮಿತಿ ಮುಂದೆ ಹೋಗಿ ತೀರ್ಮಾನವಾಗಲಿ. ಪ್ರಾರಂಭದಲ್ಲೇ ಎಲ್ಲವನ್ನೂ ಸರ್ಕಾರದ ಕೆಳಗೆ ತರುವುದು ಬೇಡವೆಂಬುದು ನನ್ನ ಮಾತಿನ ಅಭಿಪ್ರಾಯ. ತಾವು ಒಳ್ಳೆಯ ಉದ್ದೇಶ ಇಟ್ಟುಕೊಂಡು ಬಸವ ಕಲ್ಯಾಣ ಸಮಿತಿಯನ್ನು ಮಾಡುತ್ತಾ ಇದ್ದೀರಿ. ಸರ್ಕಾರಕ್ಕೆ ಅಪೀಲರು ಬರುವಂಥ ಸ್ಥಿತಿಯನ್ನು ಏಕೆ ಇಡುತ್ತೀರಿ. ಆ ಸಮಿತಿ ಕೆಳಗೇ ತೆಗೆದುಕೊಂಡು ಹೋಗಿ ಇಡಿ. ಇವತ್ತಲ್ಲ ನಾಳೆ ಒಂದು ಅಟಾನಮಸ್ ಅರ್ಗನೈಸೇಷನ್ ಆಗಿ ಕೆಲಸ ಮಾಡುವಂಥ ಸ್ಥಿತಿಯನ್ನು ನಿರ್ಮಾಣ ಮಾಡುವುದು ಒಳ್ಳೆಯದೆಂದು ನನ್ನ ಅಭಿಪ್ರಾಯ. ತಾವು ಇನ್ನೊಂದು ಸಲ ಯೋಚನೆ ಮಾಡಬೇಕೆಂದು ತಮ್ಮನ್ನು ಕೇಳಿಕೊಳ್ಳುತ್ತೇನೆ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೇ, ಬಹಳ ಒಳ್ಳೆಯ ಉದ್ದೇಶದಿಂದ ಈ ಮಸೂದೆಯನ್ನು ಕಂದಾಯ ಸಚಿವರು ಮಂಡಿಸುತ್ತಿದ್ದಾರೆ. ಈ ಬಸವಕಲ್ಯಾಣ ಅಭಿವೃದ್ಧಿ ಪ್ರಾಧಿಕಾರಮುಂದೆ ಅತ್ಯಂತ ಹೆಚ್ಚಿನ ಜವಾಬ್ದಾರಿಯನ್ನು ಪಡೆಯಬೇಕಾಗುತ್ತದೆ. ಇಲ್ಲಿ ತಾವು ಪುಟ 20 ರಲ್ಲಿ ಬಸವ ಕಲ್ಯಾಣದಲ್ಲಿ ಪರಂಪರೆಯ ತಾಣಗಳು ಮತ್ತು ಸ್ಮಾರಕಗಳು ಎಂದು ಎಲ್ಲವನ್ನೂ ಗುರುತು ಹಾಕಿದ್ದೀರಿ. ಇದರಲ್ಲಿ ಅನುಭವ ಮಂಟಪ ಸೇರಿಲ್ಲ. ಈ ಅನುಭವ ಮಂಟಪ ಬಹಳ ಪ್ರಾಮುಖ್ಯ. ಈ ಅನುಭವ ಮಂಟಪ ಬಹುಶಃ 12ನೇ ಶತಮಾನದಲ್ಲಿ ಅತಿ ದೊಡ್ಡ ಒಂದು ರೀತಿ ಪ್ರಜಾತಂತ್ರ ವ್ಯವಸ್ಥೆಯಲ್ಲಿ ಲೋಕಸಭೆ ಇದ್ದಹಾಗೆ ಮತ್ತು ಶಾಸನ ಸಭೆ ಇದ್ದಹಾಗೆ. ಇಲ್ಲಿ ನೀವು ಹೇಳಿರುವುದೆಲ್ಲಾ ಚೆನ್ನಾಗಿದೆ. ಮಡಿವಾಳ ಮಾಚಯ್ಯನವರ ಗದ್ದಿಗೆ, ಹರಳಯ್ಯನವರ ಗವಿ, ಕಂಬಳಿ ಮಠ, ಕಿನ್ನರಿ ಬೊಮ್ಮಯ್ಯ ಗವಿ ಇವೆಲ್ಲಾ ನಿಜವಾಗಿಯೂ ಇತಿಹಾಸವೇ. ಇವರೆಲ್ಲರನ್ನೂ ಸಮಾಜಕ್ಕೆ ಒಂದು ಹೊಸ ದಿಕ್ಕನ್ನು ಕೊಡತಕ್ಕಂಥ ಪರಂಪರೆ. ಬಸವೇಶ್ವರರು ಕೇವಲ ಯಾವುದೋ ಒಂದು ಗುಂಪಿನ ಒಂದು ವರ್ಗದ, ಒಂದು ಜನಾಂಗದ ವ್ಯಕ್ತಿ ಎನ್ನುವ ಬದಲು, ಈ ಅಭಿವೃದ್ಧಿ ಮಂಡಳಿಯ ವಿಧೇಯಕ ಮುಂದೆ ಸಮಗ್ರವಾಗಿ ಇದು ವಿಶ್ವಕ್ಕೇ ಒಪ್ಪತಕ್ಕಂಥ, ಆದರ್ಶವಾದಂಥ ಒಂದು ಮಂಡಳಿಯಾಗಿ ಕೆಲಸ ಮಾಡಬೇಕಾಗುತ್ತದೆ. ಅದರಲ್ಲಿ ಅನುಭವಮಂಟಪವನ್ನು ಸೇರಿಸಬೇಕು. ಅಂದಿನ ಇತಿಹಾಸವನ್ನೆಲ್ಲಾ ತರಿಸಿ ಅದಕ್ಕೆ ಏನೇನು ಬೇಕು, ಅನುಭವ ಮಂಟಪದ ಅಲ್ಲಮಪ್ರಭು ಬರತಕ್ಕಂಥಾದ್ದು, ಅಕ್ಕಮಹಾದೇವಿ ಬರತಕ್ಕಂಥಾದ್ದು, ಅದರ ವ್ಯವಸ್ಥೆ ಅದೇನು ಒಂದೇ, ಇತಿಹಾಸವೇ. ಅದೊಂದು ದೊಡ್ಡ, ಸಮಗ್ರವಾದಂಥ, ಶಕ್ತಿಯುತವಾದಂಥ, ಚೈತನ್ಯಪೂರ್ಣವಾದಂಥ ಅನುಭವ ಮಂಟಪ. ಆ ಅನುಭವ ಮಂಟಪವನ್ನು ನಿರ್ಮಾಣ ಮಾಡತಕ್ಕಂಥಾದ್ದೆ ಅದೇ ಒಂದು ದೊಡ್ಡದು. ಅನುಭವ ಮಂಟಪ ನೋಡುವುದಕ್ಕೇ ಬರಬೇಕು. ನಿಮ್ಮ ಬಸವ ಕಲ್ಯಾಣಕ್ಕೆ ಯಾರದರೂ ಬಂದರೆ ಬಹಳ ಪ್ರಾಮುಖ್ಯ ಅನುಭವ ಮಂಟಪ. ಅನುಭವ ಮಂಟಪವನ್ನು ನೋಡತಕ್ಕಂಥಾದ್ದೇ ಬಹುಶಃ ನನಗನಿಸುತ್ತದೆ. ಈ ದೇಶವಷ್ಟೇ ಅಲ್ಲ, ವಿಶ್ವದ ಪ್ರವಾಸಿಗರು ಬಂದರೂ ಆ ಅನುಭವ ಮಂಟಪ ಸಮಗ್ರವಾಗಿ ಒಂದು ಇತಿಹಾಸವನ್ನು ಸಾರಬೇಕು. ಅನುಭವ ಮಂಟಪ ಎಂದತಕ್ಷಣ, ಮಡಿವಾಳ ಮಾಚಯ್ಯನವರು ಹೇಗೆ ಬಂದರು, ಹರಳಯ್ಯನವರು ಹೇಗೆ ಬಂದರು, ಅಲ್ಲಮಪ್ರಭು ಹೇಗೆ ಪ್ರಿಸೈಡ್ ಮಾಡಿದರು, ಅಕ್ಕಮಹಾದೇವಿ ಹೇಗೆ ಬಂದರು ಇವೆಲ್ಲವೂ ಅಲ್ಲಿ ಬಂದು ಕುಳಿತ ತಕ್ಷಣವೇ ನಮಗೆ ಸಮಗ್ರ ಕಲ್ಪನೆ ಬರಬೇಕು. ಆ ರೀತಿಯಾದಂಥ ವ್ಯವಸ್ಥೆಯಾಗಬೇಕು. ಈಗ ಕೂಡಲ

ಸಂಗಮ ನೋಡಿದರೆ ನಿಜಕ್ಕೂ ನಿಮ್ಮ ಕಾರ್ಯದರ್ಶಿ ಜಾಮದಾವರವರನ್ನು ನಾವು ಎಷ್ಟೇ ಪ್ರಶಂಸೆ ಮಾಡಿದರೂ ಸಾಲದು. ಮತ್ತೆ ಮಾನ್ಯ ದಿವಂಗತ ಜೆ.ಹೆಚ್. ಪಟೇಲರನ್ನು ನೆನೆಸಿಕೊಳ್ಳಬೇಕು. ಈ ಮಾತನ್ನು ಅತ್ಯಂತ ಪ್ರಾಮಾಣಿಕವಾಗಿ ಹೇಳುತ್ತೇನೆ. ಹೆಚ್ಚಿನ ರೀತಿಯಲ್ಲಿ ಹಣಕಾಸನ್ನು ಒದಗಿಸಿ, ಸಮಗ್ರವಾಗಿ ಅಭಿವೃದ್ಧಿ ಮಾಡಿದರು. ಮಾನ್ಯಸಿದ್ಧರಾಮಯ್ಯನವರೂ ಇಲ್ಲಿಯೇ ಇದ್ದಾರೆ. ಇವರೆಲ್ಲಾ ಒಂದು ತರಹ ಶಕ್ತಿಯುತವಾಗಿ ಅವತ್ತು ಪ್ರೀತಿಯಿಂದ ಕೂಡಲ ಸಂಗಮದ ಬೆಳವಣಿಗೆಗೆ ಸಹಕಾರವನ್ನು ಸರ್ಕಾರದಲ್ಲಿ ನೀಡಿದ್ದಾರೆ. ಈ ಪ್ರಾಮುಖ್ಯವಾದ ಬಸವಕಲ್ಯಾಣ ಅಭಿವೃದ್ಧಿ ಮಂಡಳಿ ವಿಧೇಯಕ ಮುಖ್ಯವಾಗಿ ಆಗಬೇಕಾಗಿದೆ. ಇದು ಸಮಗ್ರವಾದಂಥಯೋಜನೆ. ಆ ಬಸವಕಲ್ಯಾಣ ಬಂತು ಎಂದರೆ ಒಟ್ಟಾರೆ ಇಡೀ 12ನೇ ಶತಮಾನ ನಮ್ಮ ಕಣ್ಣೆದುರಿಗೆ ಕಾಣಬೇಕು. ಅದರ ಇತಿಹಾಸ ನಮಗೆ ಕಾಣಬೇಕು. ಹರಳಯ್ಯನವರು, ಮಡಿವಾಳ ಮಾಚಯ್ಯನವರು ಇವರಿಗೇ ವಿಶೇಷವಾದಂಥ, ಶಕ್ತಿಯುತವಾಗಿ ರೂಪವನ್ನು ಕೊಡತಕ್ಕಂಥ ವ್ಯಕ್ತಿಗಳನ್ನು ಅಲ್ಲಿ ನೇಮಿಸಬೇಕು. ಅದಕ್ಕೆ ತಕ್ಕಂತೆ ಯೋಜನೆಯನ್ನು ನೀವು ರೂಪಿಸಬೇಕು. ಆ ಯೋಜನೆ ಪ್ರಕಾರ ನೀವು ಕಾರ್ಯವನ್ನು ಮಾಡಬೇಕು. ಬೀದರ್‌ನಲ್ಲಿ ಬಸವಣ್ಣನವರು ಇದ್ದಂಥ ಮನೆ ಇವತ್ತು ಅಲ್ಲಿ ಇಲ್ಲ. ಅದರ ಸ್ಥಳವೇ ಬೇರೆಯಾಗಿದೆ. ನನಗೆ ಗೊತ್ತಿದ್ದಂತಹ ಸ್ಥಳವೇ, ದಿಕ್ಕು ತಪ್ಪಿದೆ, ಏನೇನೋ ಆಗಿ ಆ ಸ್ಥಳ ಎಲ್ಲಿದೆ ಎನ್ನುವುದನ್ನು ಹುಡುಕುವುದೇ ಕಷ್ಟವಾಗಿದೆ. ಕಾಶ್ಮೀರದಿಂದ ಬಂಧಂಥ ಮಹಾ ವ್ಯಕ್ತಿ ಅಲ್ಲೇ ಕಾಯಕ ಮಾಡಿ ಉಳಿಯುತ್ತಾನೆ. ಅವರ ಗದ್ದಿಗೆಯನ್ನು ಎಲ್ಲೋ ಒಂದು ಕಡೆ ನಾನು ನೋಡಿದ್ದೇನೆ. ಅದು ಯಾವುದೋ ಒಂದು ಹಳ್ಳದಲ್ಲಿ ಬಿದ್ದಿದೆ. ಅಂದರೆ, ಇದೆಲ್ಲವನ್ನೂ ನೋಡಿದರೆ ನನಗೆನಿಸುತ್ತದೆ. ನೀವು ಈಗ ತಂದಿರತಕ್ಕ ಈ ವಿಧೇಯಕ ಬಹಳ ಒಳ್ಳೆಯ ಆದರ್ಶ. ತಾವು ಹಿಂದೆಲ್ಲಾ ಇದರ ಬಗ್ಗೆ ಅನೇಕಸಾರಿ ಮಾತನಾಡಿದ್ದೀರಿ. ಅನೇಕಸಾರಿ ಚರ್ಚೆ ಮಾಡಿದ್ದೀರಿ. ತಂದಿರತಕ್ಕ ಈ ಅಭಿವೃದ್ಧಿ ಮಂಡಳಿ ವಿಧೇಯಕವನ್ನು ನಾವೆಲ್ಲಾ ಸಂಪೂರ್ಣವಾಗಿ ಒಪ್ಪುತ್ತೇವೆ. ಆದರೆ, ವಿಧೇಯಕದ ಉದ್ದೇಶಗಳನ್ನು ಸಫಲ ಮಾಡುವುದಕ್ಕೆ ತಾವು ಪರಿಣಾಮಕಾರಿಯಾದಂಥ, ಶಕ್ತಿಯುತವಾದಂಥ, ವ್ಯವಸ್ಥಿತವಾದಂಥ ತಂಡವನ್ನು ವ್ಯವಸ್ಥೆ ಮಾಡಬೇಕು. ಮತ್ತೊಮ್ಮೆ ತಮಗೆ ಹೇಳತಕ್ಕಂಥಾದ್ದು, ತಾವು ಮಾಡಿರತಕ್ಕ ಈ ಪಟ್ಟಿ ಬಹಳ ಚೆನ್ನಾಗಿದೆ. ಆದರೆ, ಇನ್ನೂ ಅನೇಕ ಹೆಸರುಗಳು ಇದರಲ್ಲಿ ಬಿಟ್ಟಿದೆ. ಅದರ ಬಗ್ಗೆ ತಾವು ಕುಳಿತು, ಮಾತನಾಡಿ ಸೇರಿಸಬೇಕು. ನಾನು ಈಗಾಗಲೇ ಹೇಳಿದಹಾಗೆ ಅವರ ವಚನದಲ್ಲಿ ಸಿಗಬಹುದು. ಅನುಭವ ಮಂಟಪ ಯಾವರೀತಿ ಇತ್ತು, ಹೇಗಿತ್ತು ಎಂಬುದನ್ನು ನೋಡಬೇಕು. ಬಹಳ ಹಿಂದೆ

ಅಂದರೆ, 15–20 ವರ್ಷಗಳ ಹಿಂದೆ ಬಿ.ಡಿ. ಜತ್ತಿಯನ್ನು ನೋಡುವುದಕ್ಕೆ ಅಲ್ಲಿ ಹೋಗಿದ್ದೆ. ಏನೋ ಒಂದು ಮಾಡಿದ್ದಾರೆ. ಅನುಭವ ಮಂಟಪ ಎಂದು ಸಾಮಾನ್ಯ ಅಂಥ ದೊಡ್ಡ ಮಟ್ಟದಲ್ಲಿ, ಅವತ್ತು ಇದ್ದಂಥ ರೀತಿಯಲ್ಲಿ ಅನುಭವ ಮಂಟಪ ಇಲ್ಲ. ನಾವು ಜತ್ತಿಯವರನ್ನು ನೆನೆದುಕೊಳ್ಳಬೇಕು. ಅದರ ಬಗ್ಗೆ, ಅವರು ಬಹಳ ಕಾಳಜಿ ವಹಿಸಿದರು. ಕೊನೇ ಘಳಿಗೆಯವರೆಗೂ ಅದರ ಬಗ್ಗೆ ಚಿಂತನೆ ಇತ್ತು. ಸಮಾಜದಲ್ಲಿ ಬಸವಣ್ಣನವರ ತರಹವೇ ನಡೆಯಬೇಕು ಎಂಬ ದೃಷ್ಟಿಯಲ್ಲೂ ಅವರಿದ್ದರು. ಆದ್ದರಿಂದ, ಈ ಉದ್ದೇಶ ಸಫಲವಾಗಬೇಕಾದರೆ ತಾವು ಬಹಳ ಪ್ರಯತ್ನಪಡಬೇಕು, ನಿಮಗೆ ಕಾಳಜಿ ಇದೆ. ಪ್ರಾಮಾಣಿಕತೆ ಇದೆ. ಮನಸ್ಸು ಇದೆ. ಆದ್ದರಿಂದ, ತಮಗೆ ಕಂದಾಯ ಇಲಾಖೆ ಇರುವಾಗಲೇ ಎಲ್ಲಾ ರೀತಿಯ ಕೆಲಸ ಮಾಡಬೇಕೆಂದು ಹೇಳಿ, ಈ ಅಭಿವೃದ್ಧಿ ಮಂಡಳಿ ವಿಧೇಯಕವನ್ನು ಒಪ್ಪುತ್ತೇನೆ. ಈ ವಚನ ಎಲ್ಲಾ ಕಾಲಕ್ಕೂ ವಚನಗಳು ಎಲ್ಲಾ ಕಾಲಕ್ಕೂ ಅದೇನು ಇವತ್ತು ಅಂತ ಅಲ್ಲ. ಶತ ಶತಮಾನಗಳ ಕಾಲ ಉಳಿಯತಕ್ಕಂಥಾದ್ದು ವಚನಗಳು ಈ ವಚನಗಳ ಬಗ್ಗೆ ತಾವು ಎಷ್ಟು ಶಕ್ತಿಯುತವಾಗಿ ಇದನ್ನು ಯಾವ ಯಾವ ಭಾಷೆಗಳಲ್ಲಿ ಮಾಡಬಹುದು ಯಾರ್ಯಾರಿಗೆ ತರಬಹುದು ಎನ್ನುವವರಿಗೆ ಹೇಳಬೇಕು. ಮಹಾತ್ಮಾಗಾಂಧೀಜಿಯವರು ಬೆಳಗಾವಿಗೆ ಬಂದಾಗ ಬಸವಣ್ಣನವರ ವಚನದ ಬಗ್ಗೆ ಅವರು ಎಷ್ಟು ಅಪಾರವಾದಂತಹ ಅಭಿಮಾನವನ್ನು ಪ್ರೀತಿಯನ್ನು ಇಟ್ಟುಕೊಂಡರು ಅಂತ ಹೇಳಿದರೆ ಇದೆಲ್ಲಾ ಅನೇಕ ಇತಿಹಾಸ ಇದೆ. ಆದ್ದರಿಂದ ತಾವು ಇದೆಲ್ಲವನ್ನು ಮನಗಂಡು ಒಂದು ಹೊಸ ಶಕ್ತಿಯುತವಾಗಿ ಒಂದು ಈ ರಾಜ್ಯಕ್ಕೆ ಆದರ್ಶವಾಗಿ ಇರತಕ್ಕಂಥ ಒಂದು ಪ್ರವಾಸಿ ಕೇಂದ್ರವೂ ಆಗಬೇಕು ಮತ್ತು ಭಕ್ತಿಪೂರಕವಾದಂತಾದ್ದು ಆಗಬೇಕು, ಮತ್ತು ಸಮಾಜವಾದವನ್ನು ಹೇಳತಕ್ಕಂಥ ಎಡಪಂಕ್ತಿಯನ್ನು ಹೇಳತಕ್ಕಂಥ ಒಂದು ಹೊಸ ಶಕ್ತಿಯಾಗಬೇಕು. ಅವರ ವಚನಗಳು ಸರ್ವಕಾಲಕ್ಕೂ ಶಾಶ್ವತವಾಗಿ ಉಳಿಯಬೇಕು ಆ ರೀತಿ ಮಾಡಬೇಕೆಂದು ಹೇಳಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಮಾನ್ಯ ಅಧ್ಯಕ್ಷರೇ ಉಳಿದ ವಿಚಾರಗಳನ್ನು ನಮ್ಮ ಮಾಧುಸ್ವಾಮಿಯವರೆಲ್ಲಾ ಮಾತನಾಡಿದ್ದಾರೆ. ಬಸವಣ್ಣನವರ ಕರ್ಮ ಭೂಮಿ ಬಸವಕಲ್ಯಾಣ ಬಸವನಬಾಗೇವಾಡಿ ಅದು ಅವರ ಜನ್ಮಭೂಮಿ. ಇದು ಅವರ ಕರ್ಮ ಭೂಮಿ. ಹೌದು ಕರ್ಮಭೂಮಿಗೆ ಹೆಚ್ಚು ಪ್ರಾಶಸ್ತ್ಯವನ್ನು ಕೊಡಬೇಕಾಗುತ್ತದೆ. ಆದರೆ ಆ ಸಂದರ್ಭದಲ್ಲಿಯೇ ಜನ್ಮಭೂಮಿಯನ್ನು ಮರೆಯಬಾರದು. ಅದರ ಅಭಿವೃದ್ಧಿಯನ್ನು ಈ

ಬಿಲ್‌ನ ವ್ಯಾಪ್ತಿಯಲ್ಲಿ ತರಬೇಕು ಎನ್ನತಕ್ಕಂಥಾದ್ದು ನನ್ನ ಒಂದು ಸೂಚನೆ ಇದೆ. ಏಕೆಂದರೆ ಬಸವಣ್ಣನವರು ಬಸವನಬಾಗೇವಾಡಿಯಲ್ಲಿ ಹುಟ್ಟಿದರು. ಜನ್ಮ ಕೊಟ್ಟಂತಹ ಒಂದು ಸ್ಥಳ ಅದು. ಆ ಸ್ಥಳದ ಪರಿಸ್ಥಿತಿಯನ್ನು ನಾವು ಇವತ್ತು ನೋಡಿದರೆ ಬಹಳ ದುಃಖದ ಸಂಗತಿಯಾಗಿದೆ. ಅದರ ಅಭಿವೃದ್ಧಿಯನ್ನು ಈ ಬಿಲ್‌ನ ವ್ಯಾಪ್ತಿಗೆ ತರತಕ್ಕಂಥಾದ್ದು ಬಹಳ ಸೂಕ್ತ ಅಂಥ ನನ್ನ ಅಭಿಪ್ರಾಯ. ಮತ್ತೇ ಎರಡನೆಯದಾಗಿ ನಾನು ಸೂಚನೆ ಕೊಡತಕ್ಕಂಥಾದ್ದು ಈ ಬಿಲ್‌ನಲ್ಲಿ ಬಸವಣ್ಣನವರ ತತ್ವಗಳು ಏನಿದೆ ಅದರ ಸಂಶೋಧನೆಗೆ ಬೇಕಾಗಿರತಕ್ಕಂಥ ಮತ್ತು ಬಸವಣ್ಣನವರ ವಚನಗಳ ಅಧಾರದ ಮೇಲೆ ಇವತ್ತಿನ ಪ್ರಸ್ತುತ ಪರಿಸ್ಥಿತಿಗೆ ಸಂಬಂಧಪಟ್ಟಂತೆ ಸಂಶೋಧನೆಗೆ ಬೇಕಾಗಿರತಕ್ಕಂಥ ಒಂದು ಅಧ್ಯಯನ ಪೀಠವನ್ನು ಪ್ರತ್ಯೇಕವಾಗಿ ಸ್ಥಾಪಿಸಬೇಕು. ಏಕೆಂದರೆ ಇವತ್ತು ಎಲ್ಲಿ ನೋಡಿದರೂ ಬುದ್ಧ ಅಂಬೇಡ್ಕರ್ ಬಸವ ಎಂದು ಹೇಳಿಕೊಂಡು ಹೋಗುತ್ತಾರೆ. ಆದರೆ ಅದನ್ನು ಯಾರೂ ಓದುವುದಿಲ್ಲ ಮಾಡುವುದಿಲ್ಲ, ಅದರಲ್ಲಿ ಏನೇನು ಇದೆ ಎಂದು ತಿಳಿಯುವುದಕ್ಕೆ ಹೋಗುವುದಿಲ್ಲ. ಮತ್ತು ವೈಜ್ಞಾನಿಕ ಸತ್ಯಾಸತ್ಯತೆ ತಿಳಿಯಬೇಕು. ಏಕೆ ತಿಳಿಯಬೇಕು ಅಂದರೆ ಯಾವುದೋ ಒಂದು ತತ್ವ ಸರ್ವಕಾಲಿಕ ಸತ್ಯವೂ ಸರ್ವಕಾಲಿಕ ಶ್ರೇಷ್ಟವೂ ಅಂತ ನಾವೂ ಏನು ಹೇಳುತ್ತೇವೆ ಸರ್ವಕಾಲಿಕ ಸತ್ಯ ಮತ್ತು ಸರ್ವಕಾಲಿಕ ಶ್ರೇಷ್ಟ ಎನ್ನತಕ್ಕಂಥಾದ್ದನ್ನು ವೈಜ್ಞಾನಿಕವಾಗಿ ಒಪ್ಪಲಿಕ್ಕೆ ಆಗುವುದಿಲ್ಲ. ಆ ವೈಜ್ಞಾನಿಕ ಅಂಶಗಳು ಅದರಲ್ಲಿ ಬರತಕ್ಕಂಥ ರೀತಿಯಲ್ಲಿ ಅಧ್ಯಯನ ಮಾಡತಕ್ಕಂಥ ರೀತಿಯಲ್ಲಿ ಅದನ್ನು ವ್ಯವಸ್ಥೆ ಕಲ್ಪಿಸಿಕೊಡಬೇಕು. ಮತ್ತು ನಿಜವಾದಂತಾದ್ದು ಬಸವಣ್ಣನವರ ವಿಶ್ವ ದೃಷ್ಟಿ ಏನಿದೆ ಅದು ಸಂಕುಚಿತವಾಗುತ್ತಿದೆ. ಬಸವಣ್ಣನವರ ದೃಷ್ಟಿಯನ್ನು ಬಸವಣ್ಣನವರ ಅಲೋಚನೆಯನ್ನೇ ಸಂಕುಚಿತಗೊಳಿಸತಕ್ಕಂಥ ಪ್ರಯತ್ನ ಮಾಡುತ್ತಿದ್ದಾರೆ. ನಾನು ಬಹಳ ಬೇಸರದಿಂದ ಹೇಳಬೇಕಾಗುತ್ತದೆ. ಬಸವಣ್ಣನವರನ್ನು ಇವತ್ತು ಬಸವಣ್ಣನವರನ್ನು ಮತ್ತು ಬಸವಣ್ಣನವರ ತತ್ವಗಳನ್ನು ಒಂದು ಜಾತಿಗೆ ಅಂಟಿ ಹಾಕತಕ್ಕಂಥ ಪ್ರಯತ್ನವನ್ನು ಇವತ್ತು ನಾವು ನೋಡುತ್ತಿದ್ದೇವೆ. ಆ ರೀತಿ ಮಾಡತಕ್ಕಂಥಾದ್ದು ಬಸವಣ್ಣನವರಿಗೆ ಮಾಡತಕ್ಕಂಥ ದ್ರೋಹ. ಅವರನ್ನು ಯಾವುದೋ ಒಂದು ಜಾತಿಗೆ, ಯಾವುದೋ ಒಂದು ಧರ್ಮಕ್ಕೆ, ಅದು ನನ್ನ ಲೆಕ್ಕದಲ್ಲಿ ಬಸವಣ್ಣನವರಿಗೆ ಮಾಡತಕ್ಕಂಥ ದ್ರೋಹ ಅದು. ಯಾವತ್ತೂ ಆ ಮನುಷ್ಯ ಯಾವ ಜಾತಿಯನ್ನು, ಧರ್ಮವನ್ನು ಸಮರ್ಥನೆ ಮಾಡಿದವರಲ್ಲ. ಅಥವಾ ಜಾತಿಗೋಸ್ಕರ ಮಾತನಾಡಿದವರೂ ಅಲ್ಲ. ಅಂತಹ ಸ್ಥಿತಿ ನಿರ್ಮಾಣವಾಗುತ್ತಿದೆ. ಬೇಸರದ ಸಂಗತಿ ಅದು. ಬಸವಣ್ಣನವರಿಗೆ ಒಂದು ಜಾತಿ, ಅಂಬೇಡ್ಕರ್‌ಗೆ ಒಂದು ಜಾತಿ, ಎಂದು ಅಂಟಿ

ಹಾಕತಕ್ಕಂಥ ಸ್ಥಿತಿ ಎನು ನಿರ್ಮಾಣವಾಗುತ್ತಿದೆ ಅದು ನಿಜವಾಗಿಯು ಕೂಡ ಈ ದೇಶದ ದುರಂತಗಳಲ್ಲಿ ಒಂದು. ಅಂತಹ ಪರಿಸ್ಥಿತಿ ನಿರ್ಮಾಣವಾಗದಂತೆ ನೋಡಿಕೊಳ್ಳಬೇಕಾಗಿರುವಂತಾದ್ದು ಒಂದು ಮುಖ್ಯವಾದ ಕೆಲಸ, ಅದನ್ನು ಮಾಡಬೇಕೆಂದು ಹೇಳಿ ನಾನು ಈ ಬಿಲ್‌ಗೆ ಬೆಂಬಲವನ್ನು ಕೊಟ್ಟು ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಬಂಡೆಪ್ಪ ಕಾಶಂಪುರ್ : ಮಾನ್ಯ ಅಧ್ಯಕ್ಷರೇ ಈ ಒಂದು ಪ್ರಾಧಿಕಾರವನ್ನು ಮಾಡಿದ್ದನ್ನು ನಾನು ಸ್ವಾಗತ ಮಾಡುತ್ತಾ, ಹಾಗೂ ಎಲ್ಲಾ ಬೀದರ್ ಜನತೆಯ ಪರವಾಗಿ ಅಭಿನಂದನೆ ಸಲ್ಲಿಸಿ, ಇವತ್ತು ಬೀದರ್ ಒಂದು ಡಿಸ್ಟ್ರಿಕ್ಟ್ ಎಂದು ತೆಗೆದುಕೊಂಡು ಬೀದರ್ ಪ್ರಾಪರ್ ಕ್ಷೇತ್ರದವನು ನಾನು. ಬೀದರ್ ಪ್ರಾಪರ್‌ನಲ್ಲಿ ಒಂದು ದೊಡ್ಡ ಕೋಟೆ ಇದೆ. ಇವತ್ತು ಹೈದ್ರಾಬಾದ್ ಗೋಲ್‌ಗುಂಬಜ್‌ಗಿಂತ ಬಹಳ ದೊಡ್ಡ ಗುಂಬಜ್ ಇದೆ. ಅಮೇಲೆ ನರಸಿಂಹಸ್ವಾಮಿ ಟೆಂಪಲ್ ಇದೆ. ಆಮೇಲೆ ಗುರುದ್ವಾರ ಇದೆ. ಇವತ್ತು ಇಂಡಿಯಾ ಲೆವೆಲ್‌ನಲ್ಲಿ ಎರಡನೇ ಸ್ಥಾನ ಅದು. ಒಂದು ಗೋಲ್ಡನ್ ಟೆಂಪಲ್ ಬಿಟ್ಟರೆ ಎರಡನೆಯದು ಗುರುನಾನಕರ ಪವಿತ್ರ ಸ್ಥಾನ. ಅದಕ್ಕೆ ಈ ಒಂದು ಪ್ರಾಧೀಕಾರದ ರಚನೆಯಲ್ಲಿ ಈಗ ಮಂಡಳಿಯ ರಚನೆ ಪಟ್ಟಿಯಲ್ಲಿ ಈ ಬೀದರ್ ಜಿಲ್ಲೆಯ 6 ಜನ ಶಾಸಕರನ್ನು ಸದಸ್ಯರೆಂದು ಇಡಬೇಕೆಂದು ನಾನು ಮನವಿ ಮಾಡುತ್ತೇನೆ. ಏಕೆಂದರೆ ಬೀದರ್ ಡಿಸ್ಟ್ರಿಕ್ಟ್ ಆ ಒಂದು ಟೂರಿಜಂ ಸಲುವಾಗಿ ಇವತ್ತು ಹುಮ್ನಾಬಾದ್‌ನಲ್ಲಿ ದೊಡ್ಡದೊಂದು ಗುರುನಾನಕರ ಕಾಲದ ಒಂದು ಮಂದಿರ ಇದೆ. ಅದೇ ರೀತಿ ಅಲ್ಲಲ್ಲಿ ಒಂದೊಂದು ಸ್ಟಾರಿಕ್ ಪ್ಲೇಸಸ್ ಇದೆ. ಆದ್ದರಿಂದ ಇಡೀ ಬೀದರ್ ಡಿಸ್ಟ್ರಿಕ್ಟ್‌ನ್ನು ನಾವು ಪ್ರಮೋಟ್ ಮಾಡಬೇಕಾಗುತ್ತದೆ. ನಮ್ಮಲ್ಲಿ ಬಂದಂತಹ ಜನರಿಗೆ ನಾವು ಬಸವಕಲ್ಯಾಣ ತೋರಿಸಬೇಕು. ಅಲ್ಲಿಂದ ಬಂದವರಿಗೆ ನಾವು ಬೀದರ್‌ಗೆ ಕಳುಹಿಸಬೇಕು. ಹಾಗಾಗಿ ಬರೇ ಅದೇ ಭಾಗದ ಎಂಎಲ್‌ಎ ಗಳಿಗೆ ಸದಸ್ಯತ್ವ ಕೊಟ್ಟಿದ್ದೀರಿ ಅದು ಬಿಟ್ಟು ಈ ಬೀದರ್ ಡಿಸ್ಟ್ರಿಕ್ಟ್‌ನಲ್ಲಿ 6 ಜನ ಎಂಎಲ್‌ಎ ಗಳು ಇದ್ದೇವೆ. ಆ 6 ಜನರಿಗೂ ಸದಸ್ಯತ್ವ ಕೊಟ್ಟರೆ ಮುಂದಿನ ಬೆಳವಣಿಗೆಯ ಬಗ್ಗೆ ವಿಚಾರವಿಮರ್ಶೆ ಮಾಡುವುದಕ್ಕೆ ಅನುಕೂಲವಾಗುತ್ತದೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ಮಾನ್ಯ ಅಧ್ಯಕ್ಷರೇ, ಈ ಬಿಲ್‌ನ್ನು ನಾನು ಸ್ವಾಗತಿಸುತ್ತಾ, ಇದು ಬಹಳ ಅಗತ್ಯವಾಗಿ ಮಾಡಬೇಕಾದಂತಹ ಒಂದು ಕೆಲಸ. ಹೇಗೆ ಇವತ್ತು ಕೂಡಲ ಸಂಗಮ ಅಭಿವೃದ್ಧಿ ಪ್ರಾಧಿಕಾರದ ವತಿಯಿಂದ ಅದಂತಹ ಕೆಲಸವನ್ನು ನೋಡಿದರೆ ನಾವು ಅಲ್ಲಿಗೆ ಹೋದಾಗ ಒಂದು ಸಮಾಧಾನ ಸಿಗುತ್ತದೆ. ಆ ಮಹಾಪುರುಷರು

ಮಾಡಿರುವಂತಹ ತ್ಯಾಗ, ಅವರು ಹಾಕಿ ಕೊಟ್ಟಿರತಕ್ಕಂಥ ದಾರಿ ಇತ್ಯಾದಿ, ಬಗ್ಗೆ ಚಿಂತನೆ ಪ್ರಾರಂಭವಾಗುತ್ತದೆ. ಹಾಗಾಗಿ ಬಹಳ ಒಳ್ಳೆಯ ರೀತಿಯಲ್ಲಿ ಕೂಡಲಸಂಗಮ ಅಭಿವೃದ್ಧಿ ಪ್ರಾಧಿಕಾರ ಅಗಿದೆ. ಅದೇ ರೀತಿಯಲ್ಲಿ ಈ ಬಸವಕಲ್ಯಾಣ ಅಭಿವೃದ್ಧಿ ಮಂಡಳಿಯು ಸಹ ಒಳ್ಳೆಯ ರೀತಿಯಲ್ಲಿ ಕೆಲಸ ಮಾಡಿ ಒಂದು ಒಳ್ಳೆಯ ಮಾದರಿಯಾಗುವಂತಹ ಕೆಲಸವನ್ನು ಮಾಡಬೇಕು. ಅದಕ್ಕೆ ನಿಶ್ಚಿತವಾಗಿ ಸರ್ಕಾರ, ನಾನು ಮಾನ್ಯ ಸಚಿವರಲ್ಲಿ ವಿನಂತಿಸಿಕೊಳ್ಳುವುದು, ತಮ್ಮ ತಾವು ಮಂಡಿಸಿರತಕ್ಕಂಥ ಬಿಲ್‌ನಲ್ಲಿ ಬೊಕ್ಕಸಕ್ಕೆ ಎರಡು ಕೋಟಿ ರೂಪಾಯಿ ಅವರ್ತಕ ಹಣ ಬೇಕಾಗಬಹುದು ಎಂದು ಹೇಳಿದ್ದೀರಿ, ಅದರೆ ಮೊನ್ನೇ ಮಾನ್ಯ ಹಣಕಾಸಿನ ಸಚಿವರು ಬಸವಕಲ್ಯಾಣ ಅಭಿವೃದ್ಧಿ ಪ್ರಾಧಿಕಾರಕ್ಕೆ 5 ಕೋಟಿ ರೂಪಾಯಿಗಳನ್ನು ಕೊಡುತ್ತೇವೆಂದು ಹೇಳಿದ್ದೀರಿ. ಆದರೆ ಬಿಲ್‌ನಲ್ಲಿ ಇವರು ಎರಡು ಕೋಟಿ ರೂಪಾಯಿಗಳನ್ನು ಖರ್ಚು ಮಾಡುತ್ತೇವೆಂದು ಹೇಳಿದ್ದಾರೆ.

ಶ್ರೀ ಎಂ.ಪಿ. ಪ್ರಕಾಶ್ : ಹಳೆಯ ಬಿಲ್ ಅದನ್ನು ಹಾಗೆಯೇ ತಂದಿದ್ದೇವೆ. ಅದನ್ನು 5 ಕೋಟಿ ಅಂತ ಮಾಡಿಕೊಳ್ಳುತ್ತೇವೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ಮಾನ್ಯ ಅಧ್ಯಕ್ಷರೇ, ಒಂದು ತಿದ್ದುಪಡಿ ಮಾಡಬೇಕಾಗುತ್ತದೆ. ಬಜೆಟ್‌ನಲ್ಲಿ 5 ಕೋಟಿ ಎಂದು ಹೇಳಿದ್ದಾರೆ. ಬಿಲ್‌ನಲ್ಲಿ ಎರಡು ಕೋಟಿ ಎಂದು ಇದೆ. ಒಂದು ತಿದ್ದುಪಡಿ ಕಳುಹಿಸಿ ಇದನ್ನು 5 ಕೋಟಿ ಎಂದು ಮಾಡಿಕೊಂಡರೆ ಅದನ್ನು ಸರ್ವಾನುಮತದಿಂದ 5 ಕೋಟಿ ಎಂದು ಸೂಚಿಸಿಕೊಂಡರೆ ಒಳ್ಳೆಯದು. 5 ಕೋಟಿ ರೂಪಾಯಿಗಳಲ್ಲಿ ಒಳ್ಳೆಯ ಕೆಲಸವನ್ನು ಪ್ರಾರಂಭಿಸಬೇಕು ಮತ್ತು ಮಾದರಿಯಾಗಿ ಕೂಡಲ ಸಂಗಮ ಮಾಡಿದಂತೆ ಮಾಡಬೇಕು ಎನ್ನುವುದನ್ನು ನಾನು ವಿನಂತಿಸಿ ಕೊಳ್ಳುತ್ತೇನೆ. ಇದರಲ್ಲಿ ಒಂದು ಅಂಶ ಸ್ವಲ್ಪ ತಪ್ಪಿರಬಹುದು ಅದನ್ನು ಎಲ್ಲಿಯಾದರೂ ಸೇರಿಸಿಕೊಳ್ಳಬೇಕು. ಇಲ್ಲಿ 35ರಲ್ಲಿ ಲೆಕ್ಕಪರಿಶೋಧನೆ ವಿಷಯ ಇದೆ ಲೆಕ್ಕಪತ್ರಗಳು ಮತ್ತು ಲೆಕ್ಕ ಪರಿಶೋಧನೆ ಇದರೊಳಗೆ ಸಾಮಾನ್ಯವಾಗಿ ನಾವು ಹಿಂದೆ ಎಲ್ಲಾ ಬಿಲ್‌ಗಳನ್ನು ನೋಡಿದಂತೆ ನಮ್ಮ ಸದನಕ್ಕೆ ಅದರ ಲೆಕ್ಕಪತ್ರಗಳನ್ನು ಮಂಡಿಸುವಂತಹ ಒಂದು ಕ್ಲಾಜ್ ಇರುತ್ತದೆ. ನಾವು ಸದನಕ್ಕೆ ಲೆಕ್ಕಪತ್ರಗಳನ್ನು ಮಂಡಿಸುತ್ತೇವೆ ಎನ್ನುವಂತಾದ್ದು. ಹಾಗಾಗಿ ಅದು ತಪ್ಪಿ ಹೋಗಿದ್ದರೆ ಸದನಕ್ಕೂ ಆ ಲೆಕ್ಕಪತ್ರಗಳನ್ನು ಮಂಡಿಸಬೇಕು ಎನ್ನುವಂತಾದ್ದನ್ನು ಸೇರಿಸಿಕೊಳ್ಳಬೇಕು ಎನ್ನುವಂತಹ ಅಗತ್ಯತೆ ಇದೆ ಅಂತ ಅನಿಸುತ್ತದೆ. ಅದನ್ನು ಜೋಡಿಸಿಕೊಂಡು ಸದನಕ್ಕೆ ಈ ಲೆಕ್ಕಪತ್ರಗಳನ್ನು ಮಂಡಿಸಬೇಕು ಎನ್ನುವುದನ್ನು ಸೇರಿಸಿಕೊಳ್ಳಬೇಕೆಂದು ಹೇಳುತ್ತಾ

ಒಂದು ವಿನಂತಿಯನ್ನು ನಾನು ಸರ್ಕಾರಕ್ಕೆ ಮಾಡುವುದಕ್ಕೆ ಬಯಸುತ್ತೇನೆ. ನಾವು ಇವತ್ತು ಕೂಡಲ ಸಂಗಮ ಅಭಿವೃದ್ಧಿ ಪ್ರಾಧಿಕಾರ ಮಾಡಿದ್ದೇವೆ. ಇವತ್ತು ನಾವು ಬಸವಕಲ್ಯಾಣ ಅಭಿವೃದ್ಧಿ ಬಿಲ್ ಪಾಸ್ ಮಾಡಿ ಕೊಡುತ್ತಿದ್ದೇವೆ.

ಕಾಗಿನೆಲೆ ಅಭಿವೃದ್ಧಿ ಪ್ರಾಧಿಕಾರಕ್ಕೆ 3 ಕೋಟಿ ರೂಪಾಯಿಗಳನ್ನು ಕೊಡುವ ಬಗ್ಗೆ ಈ ಬಜೆಟ್‌ನಲ್ಲಿ ಹೇಳಿದ್ದಾರೆ. ನಮ್ಮ ರಾಜ್ಯದಲ್ಲಿ ಈ ರೀತಿಯಾದಂತಹ ಅನೇಕ ಮಹಾಪುರುಷರುಗಳು ಅನೇಕ ಐತಿಹಾಸಿಕ ಮತ್ತು ಸಾಂಸ್ಕೃತಿಕ ಸ್ಥಳಗಳು ಇವೆ. ಉದಾಹರಣೆಗೆ ಮಾನ್ಯ ಕಂದಾಯ ಸಚಿವರಿಗೆ ಗೊತ್ತಿದೆ, ನಮ್ಮ ಬನವಾಸಿ ಇದೆ. ಈ ಸಲ ಪಂಪ ಪ್ರಶಸ್ತಿಯನ್ನು ಸಹ ನಾವು ಕೊಡಲಿಲ್ಲ. ನಮ್ಮದು ನಿರ್ಲಕ್ಷ್ಯವಾಗುತ್ತಿರುವುದಕ್ಕೆ ಇನ್ನೊಂದು ಉದಾಹರಣೆ ಇದೆ. ಒಟ್ಟಾರೆ ಇಡೀ ರಾಜ್ಯದಲ್ಲಿ ಈ ರೀತಿಯ ಅನೇಕ ಮಹಾಪುರುಷರುಗಳು ಅಥವಾ ಅನೇಕ ಐತಿಹಾಸಿಕ ಸ್ಥಳಗಳು ಪ್ರೇರಣೆಯನ್ನು ಕೊಡುವಂತಹ ಸ್ಥಳಗಳು ಇವೆ. ಪ್ರವಾಸೋದ್ಯಮದ ಕೇಂದ್ರಗಳೂ ಆಗಿವೆ. ಇದನ್ನು ನಾವು ಮಾಡುವುದಕ್ಕೆ ಎಷ್ಟು ಶಕ್ತಿಸಾಮರ್ಥ್ಯ ಇದೆ ಪ್ರವಾಸೋದ್ಯಮ ಇಲಾಖೆಯಿಂದ ಬೇರೆ ಬೇರೆ ಇಲಾಖೆಯಿಂದಲೋ ಮಾಡಬೇಕು. ಅದರ ಜೊತೆಯಲ್ಲಿ ಈ ರೀತಿ ಸ್ಥಳಗಳನ್ನು ಗುರ್ತಿಸಿ ಜಿಲ್ಲೆಯಲ್ಲಿ ಒಂದು ಎರಡು ಮೂರು ನಾಲ್ಕು ರೀತಿಯ ಅದ್ಯತೆ ಮೇಲೆ ಸ್ಥಳಗಳನ್ನು ಗುರ್ತಿಸಿ ಬೇರೆ ಬೇರೆ ಕೇಂದ್ರ ಸರ್ಕಾರದಿಂದ ಇರಬಹುದು ಅಥವಾ ಅನೇಕ ಇಂಡಸ್ಟ್ರಿಯಲಿಸ್ಟ್ ಇದ್ದಾರೆ ಅವರು ನಮ್ಮ ರಾಜ್ಯದಿಂದ ಎಲ್ಲ ರೀತಿ ಸವಲತ್ತು ತೆಗೆದುಕೊಳ್ಳುತ್ತಾ ಇರುತ್ತಾರೆ. ಅದನ್ನು ಅಭಿವೃದ್ಧಿ ಮಾಡಲು ನಾವು ಅವರ ಜೊತೆ ಟೈಅಪ್ ಮಾಡಬೇಕು. ಬೆಂಗಳೂರಿನಲ್ಲಿ ಕೆಲವು ಸರ್ಕಲ್‌ಗಳನ್ನು ಮಾಡಿದ್ದಾರೆ. ನಮ್ಮ ಏರ್‌ಪೋರ್ಟನ್ನು ಮಾಡುತ್ತಾರೆ. ಅದರೆ ಈ ರೀತಿ ಸ್ಥಳಗಳನ್ನು ಗುರ್ತಿಸಿ ಅದನ್ನು ಆ ಕಂಪೆನಿಗಳು ಇಂಡಸ್ಟ್ರಿಗಳು ಉದ್ದಿಮೆಗಳೋ ಅವನ್ನು ಅಭಿವೃದ್ಧಿ ಪಡಿಸುವುದಕ್ಕೆ ಸರ್ಕಾರ ಅವನ್ನು ಪ್ರಾರಂಭಿಸುವಾಗಲೇ ಒಂದು ಕಂಡಿಶನ್ ರೀತಿಯಲ್ಲಿ ಹಾಕಿ ಅಭಿವೃದ್ಧಿ ಪಡಿಸುವುದಕ್ಕೆ ಅವಕಾಶ ಮಾಡಿದರೆ ಸರ್ಕಾರದ ಮೇಲೇ ಎಲ್ಲ ಹೊರೆ ಬರುವುದಿಲ್ಲ. ಬೇರೆಯವರೂ ಸಾಮಾಜಿಕವಾಗಿ ಆ ಜವಾಬ್ದಾರಿ ಹಂಚಿಕೊಂಡಂತಾಗುತ್ತದೆ. ಅವರಿಗೆ ಎಷ್ಟೋ ಕೋಟಿ ಲಾಭ ಮಾಡುವುದಕ್ಕೆ ಯಾವ್ಯಾವ ರೀತಿ ಅವಕಾಶ ಬೇಕೋ ಅದನ್ನೆಲ್ಲ ಸರ್ಕಾರ ಅವರಿಗೆ ಮಾಡಿಕೊಡುತ್ತದೆ, ಅದಕ್ಕಾಗಿ ಇಂಥದೊಂದು ಕ್ಲಾಜ್ ಹಾಕಿ ಅವರು ಆ ಪ್ರದೇಶದಲ್ಲಿರುವ ಇಂತಹ ಐತಿಹಾಸಿಕ ಮಹತ್ವವುಳ್ಳ ಮತ್ತು ಮುಂದಿನ ಜನಾಂಗಕ್ಕೆ ಒಂದು ಪ್ರೇರಣೆ ಕೊಡುವಂತಹ ಸ್ಥಳಗಳು

ಯಾವುದಿವೆಯೋ ನಮ್ಮ ಜೀವನದ ಧ್ಯೇಯ ಗುರಿಗಳನ್ನು ಸ್ಪಷ್ಟಪಡಿಸುವಂತಹ ಸ್ಫೂರ್ತಿ ಕೊಡುವಂತಹ ತಾಣಗಳು ಯಾವುದಿದೆಯೋ ಅದನ್ನು ಅಭಿವೃದ್ಧಿ ಪಡಿಸುವುದಕ್ಕೆ ಸರ್ಕಾರ ಪರೋಕ್ಷವಾಗಿ ಆ ರೀತಿಯಲ್ಲಿ ಒಂದು ಪ್ರಯತ್ನ ಮಾಡಬೇಕು ಅಂತ ಆಗ್ರಹವನ್ನು ಮಾಡಲು ನಾನು ಬಯಸುತ್ತ ಈ ಒಂದು ವಿಧೇಯಕವನ್ನು ಸ್ವಾಗತಿಸಿ ಈ ವಿಧೇಯಕ ಪರಿಣಾಮಕಾರಿಯಾಗಿ ಹೇಗೆ ಕೂಡಲಸಂಗಮ ಅಭಿವೃದ್ಧಿ ಪ್ರಾಧಿಕಾರ ಹೆಸರು ತೆಗೆದುಕೊಂಡಿದೆಯೋ ಅದಕ್ಕಿಂತ ಒಳ್ಳೆಯ ಹೆಸರು ತೆಗೆದುಕೊಳ್ಳುವುದಕ್ಕೆ ಬೇಕಾದಂತಹ ಒಂದು ರಚನಾತ್ಮಕ ಸ್ಪರ್ಧೆ ಏರ್ಪಡುವ ರೀತಿಯಲ್ಲಿ ಕೆಲಸ ನಡೆಯಲಿ ಅಂತ ಹಾರೈಸಿ ನಾನು ಈ ಬಿಲ್ಲನ್ನು ಸ್ವಾಗತ ಮಾಡುತ್ತಿದ್ದೇನೆ.

ಶ್ರೀ ಶರಣ ಪ್ರಕಾಶ್ ಆರ್ ಪಾಟೀಲ್ (ಸೇಡಂ) : ಅಧ್ಯಕ್ಷರೇ, ಬಸವಕಲ್ಯಾಣ ಅಭಿವೃದ್ಧಿ ಪ್ರಾಧಿಕಾರವನ್ನು ಮಾಡಿರುವಂಥದು ಬಹಳ ಸ್ವಾಗತರ್ಹಾ. ಇದಕ್ಕೆ ಸರ್ಕಾರಕ್ಕೆ ಅಭಿನಂದನೆ ಸಲ್ಲಿಸಬೇಕಾಗುತ್ತದೆ. 12ನೇ ಶತಮಾನದಲ್ಲಿ ಬಸವಾದಿ ಶರಣರು ಮಾಡಿರತಕ್ಕಂತಹ ಸಾಮಾಜಿಕ ಕ್ರಾಂತಿಗೆ ಇವತ್ತು ಹೆಚ್ಚಿನ ರೀತಿಯಲ್ಲಿ ಅದಕ್ಕೆ ಮತ್ತೆ ಜನರ ತಿಳಿವಳಿಕೆ ಮತ್ತೆ ಅದರ ಬಗ್ಗೆ ಯಾರು ಪ್ರವಾಸಿಗಳಾಗಿ ಅಲ್ಲಿಗೆ ಬರುವ ಜನರ ಆಕರ್ಷಣೆ ಮಾಡುವ ರೀತಿಯಲ್ಲಿ ಇವತ್ತು ಬಹಳ ಒಳ್ಳೆಯ ಕೆಲಸ ಸರ್ಕಾರ ಮಾಡಿದೆ. ಇದರಲ್ಲಿ ಈಗಾಗಲೇ ನಮ್ಮ ಹಿರಿಯರೆಲ್ಲ ಹೇಳಿದ್ದಾರೆ. ನಾನು ಒಂದು ಮಾತು ಹೇಳಲು ಇಷ್ಟಪಡುತ್ತೇನೆ; ಈ ಬಸವಕಲ್ಯಾಣ ಅಭಿವೃದ್ಧಿ ಪ್ರಾಧಿಕಾರ ವ್ಯಾಪ್ತಿಯಲ್ಲಿ ನಮ್ಮ ಶ್ರೀರಾಮರೆಡ್ಡಿಯವರು ಹೇಳಿದಂತೆ ಬಸವಣ್ಣನವರ ಹುಟ್ಟೂರು ಬಸವನ ಬಾಗೇವಾಡಿಯನ್ನು ಅಭಿವೃದ್ಧಿ ಪಡಿಸಬೇಕು ಎಂಬುದು ಒಳ್ಳೆಯ ವಿಚಾರ ಇದೆ. ಅದೇ ರೀತಿಯಾಗಿ 12ನೇ ಶತಮಾನದಲ್ಲಿ ಕ್ರಾಂತಿಗೆ ನಾಂದಿ ಹಾಡಿದ ಹರಳಯ್ಯನವರು ಮಾಡಿದ್ದ ಚಮ್ಮಾವಿಗೆ ಬಸವಣ್ಣನವರಿಗಾಗಿ ಇನ್ನೂ ಕೂಡ ಸೇಡಂ ತಾಲೂಕಿನ ಬಿಜನಹಳ್ಳಿ ಗ್ರಾಮದಲ್ಲಿ ಇವತ್ತಿಗೂ ನೋಡಬಹುದು. ಆ ಬಿಜನಹಳ್ಳಿ ಗ್ರಾಮವನ್ನು ಅಭಿವೃದ್ಧಿಪಡಿಸುವುದಕ್ಕೆ ಈ ಪ್ರಾಧಿಕಾರದ ವ್ಯಾಪ್ತಿಯಲ್ಲಿ ತೆಗೆದುಕೊಳ್ಳಬೇಕೆಂದು ಸಚಿವರಲ್ಲಿ ನಾನು ಮನವಿ ಮಾಡಿಕೊಳ್ಳುತ್ತೇನೆ. ಏಕೆಂದರೆ ಹರಳಯ್ಯನವರು ಸ್ವಂತ ಚರ್ಮದಿಂದ ಮಾಡಿದ್ದ ಚಮ್ಮಾವಿಗೆ 12ನೇ ಶತಮಾನದಲ್ಲಿ ಆದ ಬಸವಣ್ಣನ ಕ್ರಾಂತಿಗೆ ಮೂಲಭೂತವಾದ ಉಳಿದಿರುವ ಅವಶೇಷ ಅದೊಂದೇ. ಬಸವಣ್ಣನವರ ಕಾಲದಲ್ಲಿನ ಉಳಿದಿರುವುದರಲ್ಲಿ ಚಮ್ಮಾವಿಗೆ ಬಹಳ ಪ್ರಮುಖ ಸ್ಥಾನವಿದೆ. ಇವತ್ತಿಗೂ ಆ ಚಮ್ಮಾವಿಗೆ ಬಿಜನಹಳ್ಳಿಯಲ್ಲಿ ಇವೆ. ಅದಕ್ಕಾಗಿ ಸೇಡಂ ತಾಲೂಕಿನ

ಬಜನಹಳ್ಳಿ ಗ್ರಾಮವನ್ನು ಬಸವಕಲ್ಯಾಣ ಅಭಿವೃದ್ಧಿ ಪ್ರಾಧಿಕಾರ ವ್ಯಾಪ್ತಿಯಲ್ಲಿ ಸೇರಿಸಿಕೊಂಡು ಅದರ ಅಭಿವೃದ್ಧಿ ಪಡಿಸಲು ಸರ್ಕಾರ ಮುಂದೆ ಬರಬೇಕು. ಅದಲ್ಲದೆ 12ನೇ ಶತಮಾನದಲ್ಲಿ ಬಸವಾದಿ ಶರಣರು ಬರೆದಿರುವ ವಚನ ಸಾಹಿತ್ಯವನ್ನು ಅದು ಸರ್ವಕಾಲಿಕ ಅಂತ ಮಾತು ಇವತ್ತು ಹೇಳಬಹುದು, 12ನೇ ಶತಮಾನದಲ್ಲಿ ಬಸವಣ್ಣ ಎಲ್ಲ ಸಮಾಜದ ಶರಣರಿಗೆ ಅಸ್ಪದ ಕೊಟ್ಟು ಅವರಲ್ಲಿದ್ದ ವಿಚಾರಗಳನ್ನು ಸಮಾಜದ ಪರಿವರ್ತನೆಗಾಗಿ ಸಮಾಜದಲ್ಲಿ ಸಮಾನತೆಗಾಗಿ ಮಾಡಿರುವಂತಹ ವಚನ ಸಾಹಿತ್ಯವನ್ನು ಹೆಚ್ಚಿಗೆ ನಾವು ಜನರಿಗೆ ಮುಟ್ಟಿಸಲು ಇನ್ನೂ ಹೆಚ್ಚಿನ ರೀತಿಯಲ್ಲಿ ವೈಜ್ಞಾನಿಕವಾಗಿ ಸಾಮಾನ್ಯ ಜನರಿಗೆ ಮುಟ್ಟುವ ರೀತಿಯಲ್ಲಿ ಈ ವಚನ ಸಾಹಿತ್ಯವನ್ನು ಪ್ರಿಂಟ್ ಮಾಡಿಸಿ ಜನರಿಗೆ ಮುಟ್ಟಿಸುವ ಕೆಲಸವನ್ನು ಈ ಪ್ರಾಧಿಕಾರದ ವ್ಯಾಪ್ತಿಯಲ್ಲಿ ಸೇರಿಸಿಕೊಳ್ಳಬೇಕೆಂದು ಮನವಿ ಮಾಡಿ ನಾನು ಸರ್ಕಾರಕ್ಕೆ ಮತ್ತೊಮ್ಮೆ ಅಭಿನಂದನ ಸಲ್ಲಿಸಿ ನನ್ನ ಮಾತು ಮುಗಿಸುತ್ತೇನೆ.

ಶ್ರೀ ಎಚ್. ಆಂಜನೇಯ (ಭರಮಸಾಗರ): ಅಧ್ಯಕ್ಷರೆ ಜಗಜ್ಯೋತಿ ಬಸವಣ್ಣನವರ ವಿಚಾರಧಾರೆಗಳನ್ನು ಮತ್ತು ಅವರು ಮಾಡಿದಂತಹ ಕಲ್ಯಾಣ ಕಾರ್ಯಗಳನ್ನು ಅವರು ಸಾಧಿಸಿದಂತಹ ಸಾಮಾಜಿಕ ಕ್ರಾಂತಿಯನ್ನು ನಾವು ಎಷ್ಟು ಕೊಂಡಾಡಿದರೂ ಕೂಡ ಸಾಲದು. ವಿಶೇಷವಾಗಿ ಕೆಳವರ್ಗದಿಂದ ಬಂದಿರುವ ನಾವಂತೂ ಬಸವಣ್ಣನವರನ್ನು ಬೆಳಿಗ್ಗೆ ಎದ್ದ ತಕ್ಷಣ ನೆನೆಯುತ್ತೇವೆ. ನಮ್ಮ ಮನೆಗಳಲ್ಲಿ ಕಡ್ಡಾಯವಾಗಿ ಯಾವುದೇ ಒಬ್ಬ ದಲಿತರ ಮನೆಯಲ್ಲಿ ನೀವು ನಮ್ಮ ಕಡೆ ಬಂದು ನೋಡಬಹುದು ಬಸವಣ್ಣನವರ ಫೋಟೋ ಇರುತ್ತದೆ. ಗಾಂಧೀಜಿಯವರ ಫೋಟೋ ಇರುತ್ತದೆ ಜೊತೆಗೆ ಅಂಬೇಡ್ಕರ್ ಫೋಟೋನೂ ಇರುತ್ತದೆ. ಈ ರೀತಿ ಬಸವಣ್ಣನವರನ್ನು ನೆನೆಯುವ ಕೆಲಸವನ್ನು ಇವತ್ತು ನಾವು ಮಾಡುತ್ತಾ ಇದ್ದೇವೆ. ಅದಕ್ಕೆ ಕಾರಣ ಬಸವಣ್ಣನವರು 12ನೇ ಶತಮಾನದಲ್ಲಿ ಮಾಡಿದ ಒಂದು ಕ್ರಾಂತಿ. ಯಾರು ನಮ್ಮನ್ನು ಮುಟ್ಟುತ್ತಿರಲಿಲ್ಲವೋ ಯಾರು ನಮ್ಮನ್ನು ಊರ ಹೊರಗೆ ಇಟ್ಟಿದ್ದರೊ ಅಂಥ ಜನರನ್ನು ಕಟ್ಟಿಕೊಂಡು ಅನುಭವ ಮಂಟಪ ಅಂತ ಮಾಡಿ ಏನು ವಾಟಾಳ್ ನಾಗರಾಜ್ ಹೇಳಿದರಲ್ಲ ಪಾರ್ಲಿಮೆಂಟ್, ಅನುಭವ ಮಂಟಪ ಎಂಬುದು. ಅಂತಹ ಒಂದು ಪಾರ್ಲಿಮೆಂಟನ್ನು ಮಾಡಿಕೊಂಡು ಸಮಾನತೆಯ ಬೀಜವನ್ನು ಬಿತ್ತಿದರು 12ನೇ ಶತಮಾನದಲ್ಲಿ ಆ ಸಮಾನತೆಯ ಬೀಜ ಇವತ್ತೂ ನಮಗೆ ಫಲಕೊಡುತ್ತಾ ಇದೆ. ಎಲ್ಲ ರಂಗದಲ್ಲೂ ಅಸ್ಪೃಶ್ಯತೆ ಇಲ್ಲದಂತಹ ವಾತಾವರಣವನ್ನು ನಾವು ಇತ್ತೀಚಿನ ದಿನಗಳಲ್ಲಿ ನೋಡುತ್ತಾ ಇದ್ದೇವೆ. ನಮ್ಮ ನಾಡಿನ ಎಲ್ಲ ಮಠಮಾನ್ಯಗಳೂ ಪ್ರೀತಿವಾತ್ಸಲ್ಯ ದಿಂದ ಈ

ಕೆಳವರ್ಗದ ಜನರನ್ನು ಕರೆದು ಗೌರವಿಸುವಂತಹ ವಾತಾವರಣವನ್ನು ನಾವಿವತ್ತು ನೋಡುತ್ತಿದ್ದೆವೆ. ಅಂತಹ ಬಸವಣ್ಣನವರ ಬಸವಕಲ್ಯಾಣ ಅಭಿವೃದ್ಧಿ ವಿಧೇಯಕ ಎನು ಇವತ್ತು ತಂದಿದ್ದಾರೆ ನಿಜಕ್ಕೂ ಕೊಡ ನಾನು ಸರ್ಕಾರವನ್ನು ಅಭಿನಂದಿಸುತ್ತೇನೆ. ಅದರಲ್ಲೂ ಕೂಡ ವಿಶೇಷವಾಗಿ ಕಂದಾಯ ಸಚಿವರು ಬಸವಣ್ಣನವರ ಸಾಹಿತ್ಯವನ್ನು ಚೆನ್ನಾಗಿ ಅರ್ಥಮಾಡಿಕೊಂಡಿರುವವರು. ನಮ್ಮ ಸಮಾಜದಲ್ಲಿ ಅವರು ಒಂದು ನಮೂನಿ ಸ್ವಾಮಿಜಿ ಇದ್ದಂತೆ. ಆದ್ದರಿಂದ ಬಹಳ ಒಳ್ಳೆಯ ಕೆಲಸವನ್ನು ಇವತ್ತು ಮಾಡಿದ್ದಾರೆ ಅದಕ್ಕಾಗಿ ಈ ಸಂದರ್ಭದಲ್ಲಿ ನಾನು ಅವರನ್ನು ಮತ್ತು ಸರ್ಕಾರವನ್ನು ಅಭಿನಂದಿಸುತ್ತೇನೆ. ಬಸವಣ್ಣನವರ ಒಂದು ವಚನ ನನ್ನ ನೆನಪಿಗೆ ಬರುತ್ತದೆ. ಇವನ್ಯಾರವ ಇವನ್ಯಾರವನೆಂದನಿಸದಿರಯ್ಯ ಇವ ನಮ್ಮವ ಇವ ನಮ್ಮವನೆನಿಸಯ್ಯ ಕೂಡಲಸಂಗಮದೇವ. ಇವ ನಮ್ಮ ಮನೆಯ ಮಗನೆಂದೆನಿಸಯ್ಯ ಎಂಬುದು. ಆ ರೀತಿಯಾಗಿ ಹೇಳುವುದರ ಮೂಲಕ ನಮ್ಮನ್ನು ಅಪ್ಪಿಕೊಂಡು ಪ್ರೀತಿಸಿ ಗೌರವಿಸಿದಂತಹ ಬಸವಣ್ಣನವರ ವಿಚಾರಧಾರೆ ಶಾಶ್ವತವಾಗಿ ಈ ನೆಲದ ಮೇಲೆ ಅನುಷ್ಠಾನವಾಗಬೇಕು. ಆ ಒಂದು ಕೆಲಸವನ್ನು ಸರ್ಕಾರ ಮಾಡಬೇಕು. ಆಮೇಲೆ ಬಸವಣ್ಣನವರ ವಚನಗಳು ಬಹಳ ಸುಲಭ ದರದಲ್ಲಿ ಕನ್ನಡ ಸಂಸ್ಕೃತಿ ಇಲಾಖೆ ಈಗಾಗಲೇ ಪ್ರಕಟಿಸಿದೆ. ಅನೇಕ ಸಂಪುಟಗಳನ್ನು ತಂದಿದ್ದಾರೆ. ಚಿಕ್ಕ ಬುಕ್ಕುಗಳವು ಅತ್ಯಂತ ಕಡಿಮೆ ಬೆಲೆಯಲ್ಲಿ ಮಾರಾಟ ಮಾಡುವ ವ್ಯವಸ್ಥೆಯನ್ನು ಈ ಒಂದು ಮಂಡಲಿಯೂ ಮಾಡಬೇಕು. ಅವರ ವಿಚಾರ ಹೆಚ್ಚು ಹೆಚ್ಚು ಪ್ರಚಾರವಾಗಬೇಕಾದರೆ. ಇವತ್ತು ಶ್ರೀ ರಾಮರೆಡ್ಡಿಯವರು ಹೇಳಿದರು ಬಸವಣ್ಣನವರ ವಚನಗಳನ್ನು ಇತರ ಭಾಷೆಗಳಿಗೆ ಅಳವಡಿಸಬೇಕು ಅಂತ ನಮ್ಮ ತರಳಬಾಳು ಜಗದ್ಗುರು ಡಾ: ಶಿವಮೂರ್ತಿ ಮಹಾಸ್ವಾಮಿಜಿಯವರು ಇವತ್ತು ಬಸವಣ್ಣನವರ ಸಾವಿರಾರು ವಚನಗಳನ್ನು ಇಂಟರ್ನೆಟೆಗೆ ಆಂಗ್ಲಭಾಷೆಗೆ ತುರ್ಜುಮೆ ಮಾಡಿ ಅಳವಡಿಸಿ ಪ್ರಪಂಚದ ಯಾವುದೇ ಭಾಗದಲ್ಲಿ ವಾಸ ಮಾಡುವ ಬಸವಣ್ಣನವರ ಅನುಯಾಯಿಗಳು ಒಂದು ಬಟನ್ ಒತ್ತಿದರೆ ಬಸವಣ್ಣನವರ ವಚನಗಳೆಲ್ಲವೂ ಇಂಟರ್ನೆಟ್ ಇ ಮೇಲ್ ಮೂಲಕ ತರಿಸಿ ಕೊಳ್ಳುವಂತಹ ವ್ಯವಸ್ಥೆಯನ್ನು ನಮ್ಮ ಸ್ವಾಮಿಜಿಯವರು ಮಾಡಿದ್ದಾರೆ. ಈ ಮಂಡಲಿ ಬಸವಣ್ಣನವರ ಎಲ್ಲ ವಚನಗಳನ್ನು ತರಬೇಕು ಅಂತ ಹೇಳಿ ಈ ವಿಧೇಯಕವನ್ನು ಸ್ವಾಗತ ಮಾಡುತ್ತಾ ನಮ್ಮದೊಂದು ಪ್ರಾರ್ಥನೆ ತಾವು ಇದರಲ್ಲಿ ಎಲ್ಲರನೂ ಸದಸ್ಯರನ್ನಾಗಿ ಮಾಡಿದ್ದೀರಿ. ಬಸವಸಮಿತಿ ಅಧ್ಯಕ್ಷರನ್ನು ಖಾಯಂ ಸದಸ್ಯರನ್ನಾಗಿ ಮಾಡಿದ್ದೀರಿ ಅಖಿಲ ಭಾರತ ವೀರಶೈವ ಮಹಾಸಭಾದ ಅಧ್ಯಕ್ಷರನ್ನು ಒಬ್ಬ ಖಾಯಂ ಸದಸ್ಯರನ್ನಾಗಿ ಮಾಡಿದ್ದೀರಿ. ಉಳಿದ ಐದು ಜನರನ್ನು ಬಸವಣ್ಣನವರು

ಅಂಗೀಕರಿಸಿದ ಸಾರಿದ ತತ್ವಗಳ ಅನುಷ್ಠಾನಕ್ಕಾಗಿ ದುಡಿಯುವಂತಹ ವ್ಯಕ್ತಿಗಳನ್ನು ಮಾಡುತ್ತೇವೆ ಎಂದಿದ್ದೀರಿ. ಇದನ್ನು ಮಾಡುವಾಗ ಬಸವಣ್ಣನವರು ಬಯಸಿದ ಕೆಳವರ್ಗದ ಜನರನ್ನೂ ಅದರಲ್ಲಿ ತೆಗೆದುಕೊಳ್ಳುವಂತಹ ಒಂದು ತಿದ್ದುಪಡಿ ನೀವು ಕಡ್ಡಾಯವಾಗಿ ಮಾಡಬೇಕು. ಏಕೆಂದರೆ ಮುಂದೆ ಆಡಳಿತ ನಡೆಸುವವರು ಇದನ್ನು ಯೋಚನೆ ಮಾಡುತ್ತಾರೋ ಇಲ್ಲವೋ ಗೊತ್ತಿಲ್ಲ. ನಾಮ ನಿರ್ದೇಶನ ಮಾಡುವಾಗ ಏನು ಮಾಡುತ್ತಾರೆ ಅಂದರೆ ಮುಂದೆ ಈ ನಾಮ ನಿರ್ದೇಶನ ಮಾಡುವಾಗ ಏನು ಮಾಡುತ್ತಾರೆಂದರೆ ಹಿಂದೆ ಮುಂದೆ ಸುತ್ತ ಇರತಕ್ಕವರು ಅವನಿಗೆ ಬಸವಣ್ಣ ಎಂದರೆ ಗೊತ್ತಿರುವುದಿಲ್ಲ. ಒಂದು ವಚನ ಕೊಡ ಬರುವುದಿಲ್ಲ. ಬಸವಣ್ಣನ ಕ್ರಾಂತಿಕಾರಕ ಸಿದ್ಧಾಂತವೇ ಗೊತ್ತಿರುವುದಿಲ್ಲ. ಅವರ ಶಿಷ್ಯ ಎನ್ನುವ ಒಂದೇ ಕಾರಣಕ್ಕೋಸ್ಕರ ತೆಗೆದುಕೊಂಡು ಹೋಗಿ ಅವನಿಗೆ ನಾಮಿನೇಷನ್ ಮಾಡತಕ್ಕ ಕೆಲಸ ಕೊಡಬಹುದು. ಅದರಿಂದ ಕಡ್ಡಾಯವಾಗಿ ಏನು ಕೆಳವರ್ಗದ ಜನರಿದ್ದಾರೆ ಕಡ್ಡಾಯವಾಗಿ ಈ ವರ್ಗಕ್ಕೆ ಸೇರಿರುವ ಜನರು ಈ ಒಂದು ಮಂಡಳಿಯ ಸದಸ್ಯರನ್ನಾಗಿ ಮಾಡಬೇಕನ್ನುವ ಒಂದು ಆದೇಶ ಇದರಲ್ಲಿ ಅಡಕವಾಗಬೇಕು. ಈ ವರ್ಗದ ಜನರೂ ಕೂಡ ಇದರಲ್ಲಿ ಸದಸ್ಯರನ್ನಾಗಿ ಮಾಡಲೇಬೇಕು ಮತ್ತು ಮಂಡಳಿಯಲ್ಲಿ ಬರಬೇಕು ಎಂದು ಹೇಳಿ ನಾನು ಸರ್ಕಾರದಲ್ಲಿ ಮಾನ್ಯ ಅಧ್ಯಕ್ಷರ ಮೂಲಕ ಪ್ರಾರ್ಥನೆ ಮಾಡಿಕೊಂಡು ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಬಸವರಾಜ ರಾಯರೆಡ್ಡಿ (ಕೊಪ್ಪಳ):- ಮಾನ್ಯ ಅಧ್ಯಕ್ಷರೇ, ಬಸವಕಲ್ಯಾಣ ಅಭಿವೃದ್ಧಿ ಮಂಡಳಿ ವಿಧೇಯಕ 2005ನ್ನು ಇವತ್ತು ನಮ್ಮ ಕಂದಾಯ ಸಚಿವರು ಸದನದಲ್ಲಿ ಮಂಡಿಸಿದ್ದಾರೆ ಇದನ್ನು ಸ್ವಾಗತಿಸುತ್ತೇನೆ. ಈಗಾಗಲೇ ಬಹಳಷ್ಟು ಸದಸ್ಯರುಗಳು ಬಸವೇಶ್ವರನ ವಿಚಾರಗಳು ಶರಣರ ವಿಚಾರಗಳ ಬಗ್ಗೆ ಹೇಳಿದ್ದಾರೆ. ಅದನ್ನು ಮತ್ತೊಮ್ಮೆ ಹೇಳುವ ಅವಶ್ಯಕತೆ ಇಲ್ಲ. ನಾನು ಇಷ್ಟೇ ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಅಧ್ಯಾಯ-2 ಮಂಡಳಿ ಮತ್ತು ಅದರ ಉದ್ಯೋಗಿಗಳು ಇದರಲ್ಲಿ ಮುಖ್ಯಮಂತ್ರಿಗಳನ್ನು ಅಧ್ಯಕ್ಷರನ್ನಾಗಿ ಮಾಡಿದ್ದೀರಿ. ಮುಖ್ಯಮಂತ್ರಿಗಳನ್ನು ಮಾಡಿದ್ದು ಸರಿ ಇದೆ. ಅವರು ಇರುವುದರಿಂದ ಈ ಅಭಿವೃದ್ಧಿ ಮಂಡಳಿ ಹೆಚ್ಚು ಸಹಾಯಕಾರಿಯಾಗುತ್ತದೆ. ಅದರೆ ಇದರಲ್ಲಿ ಅಧ್ಯಕ್ಷರು ಬಸವ ಸಮಿತಿ ಬಸವ ಭವನ ಬೆಂಗಳೂರು ಅಧ್ಯಕ್ಷರು ಅಖಿಲ ಭಾರತ ವೀರಶೈವ ಮಹಾಸಭಾ ಬೆಂಗಳೂರು ಇವರನ್ನು ಖಾಯಂ ಸದಸ್ಯರುಗಳನ್ನಾಗಿ ಮಾಡಿದ್ದೀರಿ. ಅವರನ್ನು ಮಾಡಿದ್ದರ ಬಗ್ಗೆ ನನ್ನ ಆಕ್ಷೇಪಣೆ ಇಲ್ಲಿ ಬಸವ ಸಮಿತಿ ಬಗ್ಗೆ ಬಸವನ ವಿಚಾರದ ಬಗ್ಗೆ

ಬಸವ ಸಮಿತಿಯವರು ಮತ್ತು ವೀರಶೈವ ಮಹಾ ಸಭಾದವರು ಸರಿಯಾಗಿ ಮಾಹಿತಿಯನ್ನು ಕೊಡುತ್ತಿದ್ದಾರೆ ಆದರೆ ಇಲ್ಲಿ ಏನಾಗಿದೆ ಎಂದರೆ ಬಸವಕಲ್ಯಾಣ ಸಮಿತಿಗೆ ಇವರಿಬ್ಬರನ್ನೇ ಸದಸ್ಯರನ್ನಾಗಿ ಮಾಡುವುದರಿಂದ ಕೇವಲ ವೀರಶೈವ ಸಮಾಜಕ್ಕೆ ಸೀಮಿತವಾಗಿದೆಯೋ, ಇದು ಲಿಂಗಾಯಿತರಿಗೆ ಸಂಬಂಧ ಪಟ್ಟಿದ್ದೇನೋ ಎನ್ನುವ ಭಾವನೆ ಬೇರೆಯವರಿಗೆ ಬರಬಾರದು. ಇಲ್ಲಿ ಬೇರೆ ಬೇರೆ ಸಮಾಜದವರೆಲ್ಲರೂ ಕೂಡ ಬಹಳ ಗೌರವಾನ್ವಿತವಾಗಿ ಬಸವ ಕಲ್ಯಾಣದ ಬಗ್ಗೆ ಮತ್ತು ಬಸವ ಚಿಂತನೆ ಮತ್ತು ಶರಣರ ಚಿಂತನೆಯ ಬಗ್ಗೆ ಬಹಳ ಚನ್ನಾಗಿ ಮಾತನಾಡಿದ್ದಾರೆ. ಅದರಲ್ಲಿ ಹರಿಜನ ಗಿರಿಜನರಿಗೆ ಸೇರಿರತಕ್ಕಂಥವರಿರಬಹುದು. ಹಿಂದುಳಿದವರಿರಬಹುದು. ಎಲ್ಲರೂ ಕೂಡ ಇದರ ಬಗ್ಗೆ ಬಹಳಷ್ಟು ಗೌರವದಿಂದ ಮಾತನಾಡಿದ್ದಾರೆ. ಅದಕ್ಕೆ ದಯಮಾಡಿ ಈ ಬಸವೇಶ್ವರ ಮತ್ತು ಬಸವ ಕಲ್ಯಾಣವನ್ನು ಲಿಂಗಾಯಿತರಿಗೆ ಸೀಮಿತವಾಗಿ ಮಾಡಬಾರದು. ಆ ಹಿನ್ನೆಲೆಯಲ್ಲಿ ಬೇರೆ ಸಂಸ್ಥೆಗಳ ಮತ್ತು ಬಸವ ಪರಂಪರೆ ಶರಣ ತತ್ವಗಳ ಬಗ್ಗೆ ವಿಚಾರ ಇರತಕ್ಕವರು ಕೂಡ ಇದರಲ್ಲಿ ನಮ್ಮ ಕಂದಾಯ ಸಚಿವರು ಸದಸ್ಯರನ್ನಾಗಿ ಮಾಬೇಕೆಂದು ಹೇಳಿ ನಾನು ಕೇಳುವುದಕ್ಕೆ ಇಚ್ಛೆಪಡುತ್ತೇನೆ. ಮತ್ತೆ ಅಲ್ಲಿ ಅದರ ಜೊತೆಗೆ ಶರಣರ ಕ್ರಾಂತಿ ಮತ್ತು ಬಸವ ಕಲ್ಯಾಣದಲ್ಲಿ ನಡೆದ ವಿಚಾರಗಳಲ್ಲಿ ಕೇವಲ ಕರ್ನಾಟಕಕ್ಕೆ ಮಾತ್ರ ಸೀಮಿತವಾಗಿರಲಿಲ್ಲ. 12ನೇ ಶತಮಾನದಲ್ಲಿ ಅವತ್ತೇನು ಆ ಒಂದು ಅನುಭವ ಮಂಟಪದಲ್ಲಿ ವಿಚಾರವನ್ನು ಹಂಚಿಕೊಂಡವರು ಆಂಧ್ರಪ್ರದೇಶದಿಂದ ಬಹಳಷ್ಟು ಶರಣರು ಬಂದಿದ್ದರು. ಮಹಾರಾಷ್ಟ್ರದಿಂದಲೂ ಬಹಳಷ್ಟು ಶರಣರು ಬಂದಿದ್ದಾರೆ ಅದಕ್ಕೆ ಆಂಧ್ರಪ್ರದೇಶ ಮತ್ತು ಮಹಾರಾಷ್ಟ್ರದಲ್ಲಿ ಬಸವ ತತ್ವ ಮತ್ತು ಶರಣ ತತ್ವದ ಬಗ್ಗೆ ಚಿಂತನೆ ಇರುವಂಥ ಸಂಘಸಂಸ್ಥೆಗಳನ್ನು ಹುಡುಕಿ ಅವರನ್ನೂ ಕೂಡ ಇದರಲ್ಲಿ ಸದಸ್ಯರನ್ನಾಗಿ ಮಾಡಿದರೆ ಇದು ಅಂತರಾಷ್ಟ್ರೀಯಮಟ್ಟ ಮತ್ತು ಬೇರೆ ಬೇರೆ ರಾಜ್ಯಗಳಲ್ಲಿ ಒಂದು ವಿಚಾರ ಹೆಚ್ಚು ಪ್ರಸ್ತಾವವಾಗುತ್ತದೆ. ಇಲ್ಲದಿದ್ದರೆ ಇದು ನಮ್ಮ ಕರ್ನಾಟಕಕ್ಕೇ ಮಾತ್ರ ಉಳಿಯುತ್ತದೆ ಎನ್ನುವಂಥದ್ದು ಆಗಬಾರದು. ಆ ಹಿನ್ನೆಲೆಯಲ್ಲಿ ಬೇರೆ ಬೇರೆ ಪಕ್ಕದ ರಾಜ್ಯದಲ್ಲಿರುವಂಥ ಜನಗಳನ್ನು ಕೂಡ ತಾವು ಸದಸ್ಯರನ್ನಾಗಿ ಮಾಡುವುದಕ್ಕೆ ಪರಿಗಣಿಸಬೇಕು. ಮತ್ತು ಸ್ನೇಹಿತರಾದ ನಮ್ಮ ಭಿಮಸಾಗರ ಶಾಸಕರಾದ ಅಂಜನೇಯುರವರು ಚೆನ್ನಾಗಿ ಮಾತನಾಡಿದರು. ಇದರಲ್ಲಿ ಏನಾಗಿದೆ. ನಾವು ಸದಸ್ಯರನ್ನು ನೇಮಕ ಮಾಡುತ್ತೇವೆಂದ ಕೂಡಲೇ ನನಗೆ ಗೊತ್ತಿದೆ. ನಾಳೆ ಐದು ಜನ ಸದಸ್ಯರನ್ನು ಯಾವ ಯಾವ ರೂಲಿಂಗ್ ಪಾರ್ಟಿಇರುತ್ತದೋ ಆ ರೂಲಿಂಗ್ ಪಾರ್ಟಿ ಸದಸ್ಯರನ್ನು ಮಾಡಿಬಿಡುತ್ತಾರೆ. ಹೀಗೆ

ಆಗಬಾರದು ಇದರಲ್ಲಿ ಯಾರಿಗೆ ಬಸವ ತತ್ವ, ಶರಣ ತತ್ವ, ಬಸವಕಲ್ಯಾಣ ಮತ್ತು ಅವರ ಇತಿಹಾಸದ ಬಗ್ಗೆ ಆ ಪರಂಪರೆಯ ಬಗ್ಗೆ ಅಪಾರವಾದ ಅನುಭವ ಇದೆ. ಅಂಥವರನ್ನು ನೀವು ದಯಮಾಡಿನೇಮಿಸಿ ಮಾನ್ಯ ಮಾಧುಸ್ವಾಮಿಯವರು ಇದನ್ನು ಒಪ್ಪುತ್ತಾರೆ. ಟಿಎ ಡಿಎ ಬೇಕು ಎನ್ನುವ ಜನರನ್ನು ಇಲ್ಲಿ ಮಾಡಬಾರದು. ಟಿಎ ಡಿಎ ಎಂದು ಮಾಡಿದರೆ ಬೆಂಗಳೂರಿನವರನ್ನು ಮೈಸೂರಿನ ಆಡ್ರೆಸ್ ಕೊಟ್ಟು ಅಲ್ಲಿ ಟಿಎ ಡಿಎ ಗೆ ಹೋಗಿ ಬರಬಹುದು ಎನ್ನಬಹುದು ಅದರಿಂದ ಪ್ರಯೋಜವಾಗುವುದಿಲ್ಲ. ಅದಕ್ಕೆ ನೀವು ಟಿಎ ಕೊಡುತ್ತೀರೋ ಡಿಎ ಕೊಡುತ್ತೀರೋ. ಏನು ಕೊಡುತ್ತೀರಿ ಅದು ಬೇರೆ ವಿಚಾರ ಆದರೆ ಅದರ ಬಗ್ಗೆ ಅಪಾರವಾದ ಅನುಭ ಇರತಕ್ಕಂಥವರನ್ನು ದಯಮಾಡಿ ಐದು ಸದಸ್ಯರನ್ನು ಮಾಡಿ ಅದರಲ್ಲಿ ಹಿಂದುಳಿದವರು, ಅಲ್ಪಸಂಖ್ಯಾತರು. ಏಕೆಂದರೆ ಅನುಭವ ಮಂಟಪದಲ್ಲಿ ಇದ್ದಂಥವರೇ ಬೇರೆ ಬೇರೆ ಜಾತಿಯವರು ಮತ್ತು ಮಹಿಳೆಯರು. ಈ ಸಿದ್ಧಾಂತದಲ್ಲಿ ಅನುಭವ ಮಂಟಪದ ಸ್ಥಾಪನೆಯಾದುದೇ ನಿಮ್ನ ವರ್ಗ ಮತ್ತು ಮಹಿಳಾ ದಲಿತರ ಶೋಷಣೆಗೆ ಒಳಪಟ್ಟಂಥ ಜನಗಳಒಂದು ಭಾವನೆ ವ್ಯಕ್ತವಾಗಲಿ ಎಂದು ಹೇಳಿ ಅವತ್ತಿನ ದಿವಸ 12ನೇ ಶತಮಾನದಲ್ಲಿ ಅನುಭವ ಮಂಟಪ ಬಂದುದು. ಇಲ್ಲದಿದ್ದರೆ ನೀವು ಮಹಿಳೆಯರನ್ನು ದಲಿತರನ್ನು ಹಿಂದುಳಿದವರನ್ನು ಸದಸ್ಯರನ್ನಾಗಿ ಮಾಡದಿದ್ದರೆ ಇದಕ್ಕೆ ಅರ್ಥಬರುವುದಿಲ್ಲ. 12ನೇ ಶತಮಾನದ ವಿಚಾರಕ್ಕೆ ವಿರೋಧವಾಗುತ್ತದೆ. ಈ ಐದು ಜನರಲ್ಲಿ ಕಡ್ಡಾಯವಾಗಿ ಮೂರು ಜನಾಂಗವನ್ನು ಕೂಡ ತಾವು ಸೇರಿಸಬೇಕು. ಮತ್ತು ಇನ್ನೊಂದು ಕೊನೆಯದಾಗಿ ಸಲಹೆಯನ್ನು ಕೊಡುತ್ತೇನೆ. ಈ ವಿಧೇಯಕದ ಮುಖ್ಯ ಉದ್ದೇಶದಲ್ಲಿ ಹೇಳಿದ್ದಾರೆ. ಪುಟ 23ರಲ್ಲಿ ಹೇಳಿದ್ದಾರೆ. ಬೀದರ್ ಜಿಲ್ಲೆಯ ಬಸವ ಕಲ್ಯಾಣ ಪಟ್ಟಣದಲ್ಲಿನ ಮತ್ತು ಅದರ ಸುತ್ತಮುತ್ತಲಿನ ಪರಂಪರೆಯ ತಾಣಗಳ ಸಂರಕ್ಷಣೆ, ಅಭಿವೃದ್ಧಿ ಮತ್ತು ನಿರ್ವಹಣೆಗಾಗಿ ಮತ್ತು ಬಸವಕಲ್ಯಾಣವನ್ನು ಅಂತರರಾಷ್ಟ್ರೀಯ ಯಾತ್ರಾಸ್ಥಳವನ್ನಾಗಿ, ಸಾಂಸ್ಕೃತಿಕ ಮತ್ತು ಪ್ರವಾಸ ಕೇಂದ್ರವನ್ನಾಗಿ ಅಭಿವೃದ್ಧಿಗೊಳಿಸುವುದಕ್ಕಾಗಿ ಕಾನೂನಿನ ಮೂಲಕ ಒಂದು ಮಂಡಳಿಯನ್ನು ರಚಿಸುವುದು ಎಂದು ಹೇಳಿದ್ದೀರಿ. ದಯಮಾಡಿ ಇದರಲ್ಲಿ ಇನ್ನೂ ಒಂದು ಶಬ್ದವನ್ನು ತಾವು ಸೇರಿಸಬೇಕಾಗುತ್ತದೆ. ಇವತ್ತು ಕೇವಲ ಇದನ್ನು ನಾವು ಯಾತ್ರಾಸ್ಥಳ ಮಾಡುತ್ತೇವೆ ಮತ್ತು ಇದನ್ನು ಅಂತರರಾಷ್ಟ್ರೀಯ ಮಟ್ಟದಲ್ಲಿ ಪ್ರವಾಸಿ ಸ್ಥಳವನ್ನಾಗಿ ಮಾಡುತ್ತೇವೆ. ಸಾಂಸ್ಕೃತಿಕ ಸ್ಥಳವನ್ನಾಗಿ ಮಾಡುತ್ತೇವೆಂದರೆ ಇದಕ್ಕೆ ಅಷ್ಟು ಬೆಲೆ ಬರುವುದಿಲ್ಲ. ಇವತ್ತು ಬಸವಕಲ್ಯಾಣದ ಅಭಿವೃದ್ಧಿಯನ್ನು ಮಾಡುತ್ತಿರುವುದು ಟೂರಿಸಂ ಪರ್‌ಪಸ್ ಅಲ್ಲ ಇದು ತಾವು ಮಾಡಲಿಕ್ಕೆ ಸಾಧ್ಯ ಇದೆ. ತಾವು ಫ್ಯಾಂಟಸಿ ಪಾರ್ಕ್,

ವಾಟರ್ ಪಾರ್ಕೋ ಮಾಡಬಹುದು. ಅದರ ಬದಲಾಗಿ ಇನ್ನು ಒಂದು ಶಬ್ದವನ್ನು ತಾವು ದಯಮಾಡಿ ವಿಧೇಯಕದಲ್ಲಿ ಸೇರಿಸಬೇಕು. ಏನೆಂದರೆ ಈ ಕೇಂದ್ರವನ್ನು ಸಾಂಸ್ಕೃತಿಕ ಪ್ರವಾಸ ಕೇಂದ್ರದ ಜೊತೆಗೆ ಅಧ್ಯಯನ ಕೇಂದ್ರ ಎನ್ನುವುದು ಅಲ್ಲಿ ದಯವಿಟ್ಟು ಆ ಶಬ್ದ ಬರಬೇಕು. ಏಕೆಂದರೆ ಯಾರಾದರೂ ನಾವು ಅಧ್ಯಯನ ಮಾಡುತ್ತೇವೆಂದರೆ ಅಲ್ಲಿ ಬರೀ ಪ್ರವಾಸ ಮಾಡಿಕೊಂಡು ಈ ಸರ್ಕಾರದವರು ಇಂಥ ಒಳ್ಳೆಯ ಅನುಭವ ಮಂಟಪದಂಥ ಬಿಲ್ಡಿಂಗ್‌ನ್ನು ಕಟ್ಟಿದ್ದಾರೆ ಇಲ್ಲಿ ತ್ರಿಪುರಾಂತಕ ಕೆರೆಯ ಹೂಳನ್ನು ತೆಗೆಸಿ ಬಹಳ ಚೆನ್ನಾಗಿ ಅಲ್ಲಿ ನೀರನ್ನು ಬಿಟ್ಟು ಒಂದು ದೋಣಿ ಇಟ್ಟಿದ್ದಾರೆ, ಇವುಗಳಲ್ಲಾ. ದಯಮಾಡಿ ಅಲ್ಲಿ ಅಧ್ಯಯನ ಕೇಂದ್ರವಾಗಬೇಕು ಆ ಶಬ್ದವನ್ನು ಸೇರಿಸಿದರೆ ಅದಕ್ಕೆ ಬಹಳ ಮಹತ್ವಬರುತ್ತದೆ ಯಾರಾದರು ಬಸವ ತತ್ವ, ಅನುಭವ ಮಂಟಪದ ಬಗ್ಗೆ 12ನೇ ಶತಮಾನದ ಶರಣರ ಕ್ರಾಂತಿಯಬಗ್ಗೆ ನಾವು ಅಧ್ಯಯನ ಮಾಡುತ್ತೇವೆಂದರೆ ಅಲ್ಲಿ ಅಧ್ಯಯನ ಕೇಂದ್ರವಾಗಬೇಕು. ಒಂದು ಶೈಕ್ಷಣಿಕ ಕೇಂದ್ರವಾಗಬೇಕು. ಅದಕ್ಕೆ ಆ ಶಬ್ದವನ್ನು ಕೂಡ ಅದರಲ್ಲಿ ಸೇರಿಸಿ ಅಲ್ಲಿ ಶರಣರ ಮತ್ತು ಅದಕ್ಕೆ ಸಂಬಂಧಪಟ್ಟ ಜನಗಳಿಗೆ ಒಂದು ಶೈಕ್ಷಣಿಕ ಯಾರು ಪ್ರವಾಸಿಗರು ಹೋಗುತ್ತಾರೆ. ಯಾರು ಇತಿಹಾಸವನ್ನು ನೋಡಲಿಕ್ಕೆ ಹೋಗುತ್ತಾರೆ ಕೆಲವರು ಎರಡು ತರಹದ ಜನರಿದ್ದಾರೆ ಒಬ್ಬರು ಪ್ರವಾಸಕ್ಕಾಗಿ ತಮ್ಮ ವೇಳೆಯನ್ನು ಕಳೆಯಲಿಕ್ಕೆ ಹೋಗುತ್ತಾರೆ. ಕೆಲವು ಜನರು ಇತಿಹಾಸವನ್ನು ನೋಡಲಿಕ್ಕೆ ಹೋಗುತ್ತಾರೆ. ಇತಿಹಾಸವನ್ನು ನೋಡಲಿಕ್ಕೆ ಹೋಗತಕ್ಕ ಜನರಿಗೆ ಮತ್ತು ಅದರ ಅಧ್ಯಯನ ಮಾಡುವ ಜನರಿಗೆ ಅನುಕೂಲವಾಗುತ್ತದೆ. ಆ ದೃಷ್ಟಿಯಲ್ಲಿ ಅಲ್ಲಿ ಕೆಲವು ಜನ ಬಸವ ತತ್ವ ಮತ್ತು ಈ ಒಂದು ಬಸವಕಲ್ಯಾಣದ ಬಗ್ಗೆ ಶರಣರ ಕ್ರಾಂತಿಯ ಬಗ್ಗೆ ಇರುವಂತ ಜನರನ್ನು ಎಕ್ಸ್‌ಪರ್ಟ್ಸ್‌ನ್ನು ನೇಮಿಸಿ ಅದರ ಬಗ್ಗೆ ಸಂಪೂರ್ಣವಾದ ವಿವರಣೆ ಕೊಡುವಂತ ಅಧ್ಯಯನ ಕೇಂದ್ರವನ್ನು ಕೂಡ ಮಾನ್ಯ ಕಂದಾಯ ಸಚಿವರು ಈ ವಿಧೇಯಕದಲ್ಲಿ ಸೇರಿಸಬೇಕು. ಅದನ್ನು ಸೇರಿಸಿದರೆ ಹೆಚ್ಚು ಮಹತ್ವಬರುತ್ತದೆ. ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳಿ ಈ ವಿಧೇಯಕವನ್ನು ಕೆಲವು ಸಲಹೆಗಳನ್ನು ತಾವು ಪರಿಗಣಿಸುತ್ತೀರಿಎಂದು ನಾನು ಹೇಳಿ ಈ ಸಂದರ್ಭದಲ್ಲಿ ವಿಧೇಯಕವನ್ನು ಸ್ವಾಗತಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಹೆಚ್. ಡಿ. ಬಸವರಾಜು (ವಿರಾಜಪೇಟೆ) :- ಮಾನ್ಯ ಅಧ್ಯಕ್ಷರೆ ಬಸವಕಲ್ಯಾಣ ಅಭಿವೃದ್ಧಿ ಮಂಡಳಿ ವಿಧೇಯಕವನ್ನು ನಾನು ಸ್ವಾಗತಿಸುತ್ತೇನೆ. ಈಗಾಗಲೇ ಹಲವು ಹಿರಿಯ ಸದಸ್ಯರು ಈ ಬಗ್ಗೆ ತಮ್ಮದೇ ಆದ ಅಭಿಪ್ರಾಯವನ್ನು ಈ ಸದನದಲ್ಲಿ

ವ್ಯಕ್ತಪಡಿಸಿದ್ದಾರೆ ಆ ಒಂದು ವಿಚಾರದಲ್ಲಿ ಮತ್ತೆ ಅದನ್ನೆ ಪುನರಾರ್ವತನೆ ಮಾಡುವುದಕ್ಕೆ ಹೊರತಾಗಿ ನನ್ನದೆ ಆದ ಒಂದೆರಡು ವಿಚಾರವನ್ನು ಈ ಸಂದರ್ಭದಲ್ಲಿ ಹೇಳುತ್ತಿದ್ದೇನೆ. ಆ ಒಂದು ವಿಚಾರವನ್ನು ಇದರಲ್ಲಿ ಅಳವಡಿಸಿಕೊಳ್ಳಬೇಕು ಎಂದು ಕೂಡ ಮಾನ್ಯ ಮಂತ್ರಿಗಳಲ್ಲಿ ಕೇಳಿಕೊಳ್ಳುತ್ತೇನೆ. ಮಂಡಳಿ ಮತ್ತು ಅದರ ಉದ್ಯೋಗಿಗಳು ಎನ್ನುವ ಆ ಒಂದು ಶೀರ್ಷಿಕೆಯಡಿಯಲ್ಲಿ "ಎಫ್ ನಲ್ಲಿ ಶರಣ ಬಸವೇಶ್ವರರು ಅಂಗೀಕರಿಸಿ ಸಾರಿದ ತತ್ವಗಳ ಅನುಷ್ಠಾನಕ್ಕಾಗಿ ದುಡಿದಂಥ ರಾಜ್ಯ ಸರ್ಕಾರವು ನಾವು ನಿರ್ದೇಶನದ ಐವರಿಗೆ ಮೀರದ ಸದಸ್ಯರು ಅವರುಗಳಲ್ಲಿ ಒಬ್ಬರು ಮುಖ್ಯ ಇಂಜಿನಿಯರ್ ಸಿವಿಲ್ ಹುದ್ದೆಯನ್ನು ಹೊಂದಿದಂಥ ವ್ಯಕ್ತಿಯಾಗಿರತಕ್ಕದ್ದು". ಈ ತರಹ ಒಂದು ಸ್ಪೆಸಿಫೈ ಮಾಡಿದ್ದಾರೆ. ಸ್ಪೆಸಿಫೈ ಮಾಡುವಂಥದ್ದನ್ನು ನಾನು ಸ್ವಾಗತ ಮಾಡುತ್ತೇನೆ. ಅದೇ ರೀತಿ ಅವರು ಯಾವ ವರ್ಗದಿಂದ ಬಂದಿರಬೇಕು ಬಹುಶಃ ತಮಗೆ ಗೊತ್ತಿದೆ. 12ನೇ ಶತಮಾನದಲ್ಲಿ ಬಸವಣ್ಣನವರು ಜಾತಿಗಳ ವಿಚಾರದಲ್ಲಿ ಜಾತಿಯನ್ನು ಅಳಿಸಬೇಕು ಎಂದು ಹೇಳಿ ಒಂದು ಹೋರಾಟವನ್ನು ಮಾಡಿದಂಥ ಸಂದರ್ಭದಲ್ಲಿ ಕೆಲವು ಕೆಳವರ್ಗದ ಜನರು ಅವರ ಜೊತೆ ಅನುಯಾಯಿಗಳಾಗಿ ಅವರ ಜೊತೆ ಸೇರಿಕೊಂಡಿದ್ದರು ಅವರ ತತ್ವಗಳನ್ನು ಅನುಸರಿಸುವುದಕ್ಕೆ ಹೊರಟ್ಟಿದ್ದರು. ಆ ಅನುಯಾಯಿಗಳು ಆ ವರ್ಗದವರನ್ನು ಇದರಲ್ಲಿ ಸೇರಿಸಿತ್ತು ಎಂದರೆ ಬಹುಶಃ ಈ ಮಂಡಳಿಗೆ ಹೆಚ್ಚಿನ ಔಚಿತ್ಯ ಬರುತ್ತದೆ ಎಂದು ನಾನು ಅಂದುಕೊಳ್ಳುತ್ತಿದ್ದೇನೆ. ಇವತ್ತು ಎರಡು ಹಂತದಲ್ಲಿ ನೀವು ಐದುಜನ ಸದಸ್ಯರನ್ನು ಜಿ ಕ್ಯಾಟಗರಿಯಲ್ಲಿ ಮತ್ತು ಇನ್ನು ಐದು ಜನ ರಾಜ್ಯ ಸರ್ಕಾರದಿಂದ ನಾಮನಿರ್ದೇಶಿತರಾದ ಐವರನ್ನು ಮೀರದಂತೆ ಇತರ ಪದನಿಮಿತ್ತ ಸದಸ್ಯರನ್ನು ಆರ್ ಕ್ಯಾಟಗರಿಯಲ್ಲಿ ಸೇರಿಸಬೇಕು ಎಂದು ಹೇಳಿದ್ದೀರಿ. ಒಟ್ಟು ಹತ್ತು ಜನ ಈ ಹತ್ತು ಜನರಲ್ಲಿ ಸ್ಪೆಸಿಫಿಕ್ ಆಗಿ ಸರ್ಕಾರ ಆ 12ನೇ ಶತಮಾನದಲ್ಲಿ ಗುರುತು ಮಾಡಿದಂತಹ ಕೆಳಸ್ಥರದ ವರ್ಗಗಳ ವ್ಯಕ್ತಿಗಳನ್ನು ಮಾತ್ರವೇ ಇದರಲ್ಲಿ ಜೋಡಣೆ ಮಾಡುವಂತಹ ತಿದ್ದುಪಡಿಯನ್ನು ತರಬೇಕೆಂದು ನಾನು ಕೇಳಿಕೊಳ್ಳುತ್ತಿದ್ದೇನೆ. ಈ ಹತ್ತು ಜನರಲ್ಲಿ ಆ ವರ್ಗ ಏನಾದರೂ ಅಷ್ಟೂ ವರ್ಗ ಬರಲಿಕ್ಕೆ ಸಾಧ್ಯವಾಗಲಿಲ್ಲವೆಂದರೆ ಮೂರು ವರ್ಷದ ನಂತರ ಆ ವರ್ಗದವರನ್ನು ಅದರಲ್ಲಿ ಸೇರಿಸುವಂತಹ ರೋಟೇಷನ್ ಬೇಸಿಸ್ ಮೇಲೆ ಅದನ್ನು ನೀವೇನಾದರೂ ಈ ಒಂದು ಅಧಿನಿಯಮದ ಅಡಿಯಲ್ಲಿ ತೆಗೆದುಕೊಂಡು ಬಂದರೆ ಬಹಳಷ್ಟು ಔಚಿತ್ಯವಾಗುತ್ತದೆ ಈ ಮಂಡಲಿಗೆ ಏಕೆಂದರೆ ಅವರ ಒಂದು ತತ್ವಗಳು ಆ ದಿವಸಗಳಲ್ಲಿ ಏನು ಇತ್ತೋ ಆ ಮಂಡಲಿಗಳಲ್ಲಿ ಕೂಡ ಅದನ್ನು ಅಳವಡಿಸುವುದು ಉತ್ತಮವೆಂದು ನನ್ನ ಒಂದು ಅಭಿಪ್ರಾಯವಾಗಿದೆ. ಮಾನ್ಯ ಮಂತ್ರಿಗಳು

ಇದನ್ನು ಹೇಳಬೇಕು ಒಬ್ಬ ಮುಖ್ಯ ಇಂಜಿನಿಯರ್ ಎಂದು ಹೇಳಿ ಹೇಗೆ ಸ್ಪೆಸಿಫೈ ಮಾಡಿದ್ದೀರೋ ಮತ್ತೆ ಮಹಿಳೆಯರಿಗೆ ಇದರಲ್ಲಿ ಪ್ರಾಧಾನ್ಯತೆಯನ್ನು ಕೂಡ ತಾವು ಕೊಡಬೇಕಾಗುತ್ತದೆ. ಅನುಭವ ಮಂಟಪದಲ್ಲಿ ಮಹಿಳೆಯರಿಗೆ ಯಾವ ಸ್ಥಾನಮಾನಗಳು ಆವತ್ತಿನ ದಿನಗಳಲ್ಲಿ ಸಿಕ್ಕಿತ್ತೋ ಈ ಮಂಡಳಿಗಳಲ್ಲಿ ಕೂಡ ಅದೇ ಸ್ಥಾನಮಾನಗಳು ಇರಬೇಕು ಎನ್ನುವುದು ನನ್ನ ಹಂಬಲ ಇದರಿಂದ ತಮ್ಮ ಗೌರವ ಹೆಚ್ಚಾಗುತ್ತದೆ. ಆ ದೃಷ್ಟಿಯಿಂದ ಈ ಹತ್ತು ಸ್ಥಾನಗಳಿಗೆ ಒಂದು ಪದನಿಮಿತ್ತ ಮತ್ತು ಇತರ ಐವರಿಗೆ ಮೀರದ ನಾಮ ನಿರ್ದೇಶನ ಮಾಡುವಂತಹ ಸದಸ್ಯರು ಈ ಹತ್ತು ಜನರನ್ನು ಕೂಡ ಆ ವರ್ಗದಲ್ಲೇ ಬರುವಂತಹ ಒಂದು ವ್ಯವಸ್ಥೆಯನ್ನು ತಮ್ಮ ತಿದ್ದುಪಡಿಯಲ್ಲಿ ತರಬೇಕೆಂದು ಹೇಳಿ ಈ ಒಂದು ಮಂಡಳಿಗೆ ತಂದಿರುವಂತಹ ವಿಧೇಯಕವನ್ನು ನಾನು ಸ್ವಾಗತಿಸುತ್ತೇನೆಂದು ಮತ್ತೊಮ್ಮೆ ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಎಂ. ಪಿ. ಪ್ರಕಾಶ (ಮಾನ್ಯ ಕಂದಾಯ ಸಚಿವರು):- ಮಾನ್ಯ ಅಧ್ಯಕ್ಷರೆ, ಇಡೀ ಸದನದ ಎಲ್ಲ ಮಾನ್ಯ ಸದಸ್ಯರುಗಳು ಈ ಒಂದು ವಿಧೇಯಕವನ್ನು ಸ್ವಾಗತ ಮಾಡಿರತಕ್ಕದ್ದು ನಿಜವಾಗಿಯೂ ಒಂದು ಅಭಿಮಾನದ ಸಂಗತಿ ಆಗಿದೆ. ಬಸವ ಪಂಥಕ್ಕೆ ಮತ್ತು ಅವರು ಮಾಡಿದಂತಹ ಕ್ರಾಂತಿಕಾರಕ ವಿಚಾರಕ್ಕೆ ಈ ಸದನ ತೋರಿಸಿದಂತಹ ಗೌರವ ಎನ್ನುವಂತಹ ಭಾವನೆಯನ್ನು ನಾನು ವ್ಯಕ್ತ ಮಾಡುತ್ತೇನೆ. ಅನೇಕ ಸದಸ್ಯರು ತಮ್ಮ ಅನುಭವಗಳ ಹಿನ್ನೆಲೆಯಲ್ಲಿ ವಿಚಾರಗಳನ್ನು ಇಟ್ಟಿದ್ದಾರೆ. ಅದರಲ್ಲಿ ಈ ವಿಚಾರಗಳೆಲ್ಲವನ್ನೂ ಕೂಡ ಅಳವಡಿಸಲಿಕ್ಕೆ ಸಾಧ್ಯವಾಗದಿದ್ದರೂ ಸಾಧ್ಯ ಆಗಿರತಕ್ಕದ್ದನ್ನು ಸೇರಿಸಿದ್ದೇವೆ. ಇಲ್ಲಿ ಮೊದಲನೆಯದಾಗಿ ಮಾನ್ಯ ಮಾಧುಸ್ವಾಮಿಯವರು ಹೇಳಿದರು ಬೇರೆ ಬೇರೆ ಹತ್ತನೇ ಪುಟವನ್ನು ತಾವು ನೋಡಿದ ಹಾಗೆ ಕಾಣುತ್ತದೆ. ಅದರಲ್ಲಿ ನೋಡಬೇಕು. ಮಾನ್ಯ ವಾಟಾಳ್ ನಾಗರಾಜ್ ಅವರು ಅನುಭವ ಮಂಟಪದ ವಿಚಾರವನ್ನು ಪ್ರಸ್ತಾಪ ಮಾಡಲಿಲ್ಲ ಎನ್ನತಕ್ಕದ್ದನ್ನು ತಿಳಿಸಿದ್ದೀರಿ. ಆದರೆ ಹತ್ತನೆ ಪುಟದ ಎಫ್ ನಲ್ಲಿ ಅನುಭವ ಮಂಟಪದ ಮಾದರಿಯಲ್ಲಿ ಒಂದು ಸಭಾಂಗಣವನ್ನು ನಿರ್ಮಿಸುವುದು ಎಂದು ಸೇರಿಸಿದ್ದೇವೆ. ಆದ್ದರಿಂದ ಅದೇನು ಬಹಳ ಮಹತ್ವವಾದಂತಹ ಸ್ಥಳವಾಗಿತ್ತು ಅದಕ್ಕಾಗಿನೇ ನೀವು ಮಾಡಿಕೊಡಬೇಕು ಎಂದರು ಅದನ್ನು ಈಗಾಗಲೇ ಸೇರಿಸಿದ್ದೇವೆ. ಮಾನ್ಯ ರಾಯರೆಡ್ಡಿಯವರು ಅದರಲ್ಲಿ ಅಧ್ಯಯನಕ್ಕೆ ಬೇರೆ ಬೇರೆ ವಿಚಾರಕ್ಕೆ ಮತ್ತು ಸಾಂಸ್ಕೃತಿಕ ಶೈಕ್ಷಣಿಕ ವಿಚಾರಗಳಿಗೆ ಒತ್ತನ್ನು ಕೊಡಬೇಕು ಎಂದಿದ್ದಾರೆ. ಅದನ್ನು ಟಿ ಯಲ್ಲಿ ವಿಚಾರ

ಪ್ರಸ್ತಾಪ ಮಾಡಿದ್ದೇವೆ. ಬಸವ ಕಲ್ಯಾಣವನ್ನು ಸಾಂಸ್ಕೃತಿಕ ಕೇಂದ್ರವನ್ನಾಗಿ ಯಾತ್ರಾ ಸ್ಥಳವನ್ನಾಗಿ ಮತ್ತು ಅಂತರಾಷ್ಟ್ರೀಯ ಪ್ರವಾಸಿ ಕೇಂದ್ರವನ್ನಾಗಿ ಮಾಡುವ ಮತ್ತು ಜಗಜ್ಯೋತಿ ಶ್ರೀ ಬಸವೇಶ್ವರ ವಚನ-ಸಿದ್ಧಾಂತಗಳ ಚಿಂತನೆ ಹಾಗೂ ಪ್ರಚಾರದ ಕೇಂದ್ರವನ್ನಾಗಿ ಮತ್ತು ಬಸವ ಧರ್ಮವನ್ನು ಜಗಜ್ಯೋತಿ ಬಸವೇಶ್ವರರ ವಚನ ಸಾಹಿತ್ಯ ಮಾತ್ರವಲ್ಲದೆ ಅವರ ಸಮಕಾಲೀನರ ಹಾಗೂ ಶಿಷ್ಯರ ವಚನ ಸಾಹಿತ್ಯವನ್ನು ಪ್ರಚಾರ ಮಾಡುವ ದೃಷ್ಟಿಯಿಂದ ಮತ್ತು ಜಗಜ್ಯೋತಿ ಶ್ರೀ ಬಸವೇಶ್ವರರ ಅವರ ಸಮಕಾಲೀನರ ಮತ್ತು ಶಿಷ್ಯರ ಜೀವನ ಮತ್ತು ಧರ್ಮಕ್ಕೆ ಸಂಬಂಧಪಟ್ಟ ಇತರ ಮಹತ್ವದ ಸ್ಥಳಗಳ ಸಂರಕ್ಷಣೆ ಹಾಗೂ ಅಭಿವೃದ್ಧಿಗಾಗಿ ಹಾಗೂ ಬಸವ ತತ್ವಗಳ ಅಧ್ಯಯನಕ್ಕಾಗಿ ಶೈಕ್ಷಣಿಕ ಮತ್ತು ಸಂಶೋಧನಾ ಕೇಂದ್ರದ ಮತ್ತು ಆ ವಿಷಯಕ್ಕೆ ಸಂಬಂಧಪಟ್ಟಂತೆ ವಿಶಿಷ್ಟ ಗ್ರಂಥಾಲಯದ ಸ್ಥಾಪನೆಗಾಗಿ ಉಪ ಬಂಧ ಕಲ್ಪಿಸುವುದು ಯುಕ್ತ ಹಾಗೂ ಆನುಷಂಗಿಕವೆಂದು ಮಂಡಳಿಯು ಅಭಿಪ್ರಾಯ ಪಡುವಂಥ ಇತರ ಯಾವುದೇ ವಿಷಯಗಳು ಎಂದು ತಿಳಿಸಿದ್ದೇವೆ. ಆದ್ದರಿಂದ ಇಲ್ಲಿ ಅಧ್ಯಯನ ಕೇಂದ್ರಗಳು ಆಗುತ್ತವೆ. ಅದಕ್ಕೆ ಸಂಬಂಧಪಟ್ಟಿರತಕ್ಕಂಥ ಶೈಕ್ಷಣಿಕ ಮತ್ತು ವಿಚಾರಗಳು ನಡೆಯುತ್ತವೆ. ಅದರಲ್ಲಿ ಇದ್ದಂತಹ ವಚನಕಾರರು ನಿಮಗೆ ಈಗಾಗಲೇ ಗೊತ್ತಿದ್ದಂತೆ 355ಕ್ಕಿಂತಲೂ ಹೆಚ್ಚು ವಚನಕಾರರು ಆ ಕಾಲದಲ್ಲಿದ್ದರು. ಅದರಲ್ಲಿ ಸುಮಾರು 27ಜನ ಮಹಿಳೆಯರು ಇದ್ದರು ಸೂಳೆ ಸಂಕವ್ವನಿಂದ ಹಿಡಿದು ಅಂತ್ಯಜಳಾದ ಕಾಳವ್ವನಿಂದ ಹಿಡಿದು, ಲಕ್ಷಮ್ಮನಿಂದ ಹಿಡಿದು ಇರತಕ್ಕಂಥ ಎಲ್ಲರನ್ನೂ ಕೂಡ ಅವರ ಶಿಷ್ಯ ಪ್ರಶಿಷ್ಯ ಪರಂಪರೆಗೆ ಸಂಬಂಧಪಡತಕ್ಕ ಎಲ್ಲರ ಅಧ್ಯಯನಕ್ಕೂ ಕೂಡ ಸಂಬಂಧಪಟ್ಟಂತೆ ಮಾಡುತ್ತಾರೆ. ಮಾನ್ಯ ರಾಯರೆಡ್ಡಿಯವರು ಹೇಳಿದಂತೆ ಇದು ಬರೇ ಪ್ರವಾಸಿಗರ ಕೇಂದ್ರ ಮಾಡಬೇಕು ಎನ್ನತಕ್ಕದ್ದು ಏನು ಇಲ್ಲ. ಪ್ರವಾಸಿಗರ ಕೇಂದ್ರವೂ ಕೂಡ ಆಗಬೇಕಾಗುತ್ತದೆ. ತ್ರಿಪುರಾಂತಕ ಕೆರೆ ಅಲ್ಲಿ ಇರತಕ್ಕದ್ದು ಗುಹೆಗಳು ಇರತಕ್ಕದ್ದು ಅಲ್ಲಿರುವಂತಹ ಒಂದು ದೊಡ್ಡ ಕಿಲ್ಲೆ ಇದೆ. ಅದು ಬಹುಮನಿ ಸುಲ್ತಾನರ ಕಾಲದ್ದು. ಹೈದರ ಬಹುಮನಿಯದು ಆಗಿರತಕ್ಕದ್ದು. ಐದು ಜನ ಬಹುಮನಿ ಸುಲ್ತಾನರ ಕಾಲದಲ್ಲಿ ಆಳ್ವಿಕೆ ಮಾಡಿದಂತಹದು. ಅಲ್ಲಿರುವಂತಹ ಕೋಟೆಯನ್ನೂ ಸಹ ಸಂರಕ್ಷಣೆ ಮಾಡತಕ್ಕದಕ್ಕೆ ಪುರಾತತ್ವ ಇಲಾಖೆ ಇದೆ. ಈ ಎಲ್ಲ ಸಮಗ್ರ ದೃಷ್ಟಿಕೋನ ಇಟ್ಟುಕೊಂಡು ಅಲ್ಲಿ ಒಂದು ವಾಟರ್ ಫಾಲ್ಸ್ ಮಾಡಿ ಆಕರ್ಷಣೆ ಮಾಡತಕ್ಕದ್ದು ಒಂದೇ ವಿಚಾರವಲ್ಲ. ಈ ಮನರಂಜನೆಯ ಜೊತೆ ಜೊತೆಗೂ ಕೂಡ ಈ ವಚನ ಸಾಹಿತ್ಯೋತ್ಸವ ಮಾಡುವುದು, ಸಂಗೀತೋತ್ಸವ ಮಾಡುವುದು, ಅವರಿಗೆ ಸಂಬಂಧಪಟ್ಟಂತೆ ಸ್ವರ ವಚನಗಳನ್ನೇ ಅವರು ಮೊದಲು

ರಚನೆ ಮಾಡಿದ್ದಾರೆ. ಸ್ವರ ವಚನಗಳನ್ನು ರಚನೆ ಮಾಡಿ 32 ರಾಗಗಳ ಪ್ರಸ್ತಾಪವನ್ನು ಅವರು ಮಾಡಿದ್ದರಿಂದ ಅವೆಲ್ಲಕ್ಕೂ ಸಂಬಂಧಪಟ್ಟಂತಹ ವಿಷಯಗಳು ಇಲ್ಲಿ ಇರುತ್ತವೆ. ಮುಖ್ಯವಾಗಿ ಮಾನ್ಯ ಮಾಧುಸ್ವಾಮಿಯವರು ಮಾನ್ಯ ಮುಖ್ಯಮಂತ್ರಿಗಳು ಅಧ್ಯಕ್ಷತೆ ಇರತಕ್ಕದ್ದು, ತಪ್ಪಾಗಿ ನಿರ್ಣಯ ಮಾಡತಕ್ಕಂಥ ಪ್ರಶ್ನೆ ಇಲ್ಲ; ಅದನ್ನು ಸರಿಪಡಿಸತಕ್ಕದ್ದು ಅಲ್ಲ ಎನ್ನುವಂತಹದು. ಆದರೆ ಅಲ್ಲಿ ಪ್ರಶ್ನೆ-ಕೂಡಲಸಂಗಮದಲ್ಲಿ ಇರತಕ್ಕದ್ದು ಬೇರೆ ಕೂಡಲ ಸಂಗಮದಲ್ಲಿ ಸುಮಾರು 400-500 ಎಕರೆ ಇರತಕ್ಕ ಭೂಮಿ ಇತ್ತು ಅಲ್ಲಿ ಅದನ್ನು ಅಭಿವೃದ್ಧಿಪಡಿಸತಕ್ಕದ್ದು ಇತ್ತು ಆದರೆ ಇಲ್ಲಿ ಏನಾಗಿದೆ? ಬೇರೆ ಬೇರೆ ಸ್ವಾಯತ್ತ ಸಂಸ್ಥೆಗಳು ಬರುತ್ತವೆ. ಅಲ್ಲಿ ಮುನಿಸಿಪಾಲಿಟಿ ಇದೆ. ಮತ್ತೆ ಬೇರೆ ಬೇರೆ ಅಭಿವೃದ್ಧಿ ಪ್ರಾಧಿಕಾರಗಳು ಇವೆ. ಟ್ರಸ್ಟ್‌ಗಳು ಇವೆ ಮತ್ತು ಪುರಾತತ್ವ ಇಲಾಖೆ ಇದೆ. ಆ ಕಾರಣಕ್ಕಾಗಿ ಅವರು ಮಾಡತಕ್ಕ ನಿರ್ಣಯಗಳು ತಾವು ಗಮನಿಸಬಹುದು ಆಯುಕ್ತರ ಮಂಡಳಿಯ ತೀರ್ಮಾನ ಕಾರ್ಯಗತಗೊಳಿಸತಕ್ಕದ್ದು ಎಂದು ಹೇಳಿ:- ಪರಂತು, ಮಂಡಳಿಯ ಯಾವುದೇ ನಿರ್ಣಯವು ಈ ಅಧಿನಿಯಮದ ಅಥವಾ ಯಾವುದೇ ಇತರ ಕಾನೂನಿನ ಉಪಬಂಧವನ್ನು ಅಥವಾ ಈ ಅಧಿನಿಯಮದ ಅಥವಾ ಇತರ ಯಾವುದೇ ಕಾನೂನಿನ ಅಡಿಯಲ್ಲಿ ರಚಿಸಲಾದ ಅಥವಾ ಹೊರಡಿಸಿದ ಯಾವುದೇ ನಿಯಮ ಅಥವಾ ಅಧಿಸೂಚನೆ ಅಥವಾ ವಿನಿಮಯಗಳು ಉಪಬಂಧಗಳನ್ನು ಅಥವಾ ರಾಜ್ಯ ಸರ್ಕಾರವು ಹೊರಡಿಸಿದ ಯಾವುದೇ ಆದೇಶವನ್ನು ಉಲ್ಲಂಘಿಸುತ್ತದೆಯೆಂದು ಅಥವಾ ಮಂಡಲಿಯ ಹಿತಾಸಕ್ತಿಗೆ ಅಥವಾ ಬಸವಕಲ್ಯಾಣ ಕ್ಷೇತ್ರದ ಅಭಿವೃದ್ಧಿ ಮತ್ತು ನಿರ್ವಹಣೆಗೆ ಧಕ್ಕೆ ಉಂಟು ಮಾಡುತ್ತದೆ ಅಥವಾ ಹಾನಿಕರವಾಗುತ್ತದೆಂದು ಆಯುಕ್ತರು, ಭಾವಿಸಿದರೆ, ಅವರು ನಿರ್ಣಯವನ್ನು ಅನುಮೋದಿಸಲಾದ ಹದಿನೈದು ದಿನಗಳ ಒಳಗಾಗಿ ಎಂದು ಮಾಡಿದ್ದೇವೆ. ಅಲ್ಲಿ ಮುನಿಸಿಪಾಲಿಟಿ ಬರತಕ್ಕದ್ದು ಇದೆ. ಅವರನ್ನು ನಾವು ತೆಗೆಯುವುದಕ್ಕೆ ಬರುವುದಿಲ್ಲ. ಆ ಕಾರಣಕ್ಕಾಗಿ ಬೇರೆ ಬೇರೆ ಮಂಡಲಿ ತೆಗೆದುಕೊಳ್ಳುವ ತೀರ್ಮಾನ ಕಾಯಿದೆ ಉಪಬಂಧಗಳು ಅಲ್ಲದೇ ಯಾವುದೇ ಇತರ ಕಾನೂನು ಕಾಯಿದೆ ನಿಯಮಗಳಿಗೆ ವ್ಯತಿರಿಕ್ತವಾಗಿ ಪರಿಭಾವಿಸಬಹುದಾಗಿರತಕ್ಕಂಥ ಅಮಾಯಕ ದೋಷಗಳು ಏನು ಇರುತ್ತವೆ ಈ ಅಮಾಯಕ ದೋಷಗಳನ್ನು ಸರಿಪಡಿಸುವುದಕ್ಕೆ ಈ 14(4)ನ್ನು ಸೇರಿಸಿದ್ದೇವೆ. ಅಲ್ಲಿ ಮುನಿಸಿಪಾಲಿಟಿ ಯಾವುದೋ ಒಂದು ಪ್ರಾಧಿಕಾರದ ನಿರ್ಣಯಗಳ ಆಶಯಗಳಿಗೆ ವ್ಯತಿರಿಕ್ತವಾದಂತಹ ನಿರ್ಣಯವನ್ನು ಮಾಡಿದರೆ: ಅಥವಾ ಅಲ್ಲಿರತಕ್ಕಂಥ ಅಭಿವೃದ್ಧಿ ಟ್ರಸ್ಟ್ ಅಥವಾ ಒಂದು ಬಸವ ಸಮಿತಿಯ ದೇವಸ್ಥಾನ ಇದೆ. ಆ ಟ್ರಸ್ಟ್ ಏನಾದರೂ ಒಂದು ನಿರ್ಣಯವನ್ನು

ಮಾಡಿದರೆ ಅವೆಲ್ಲದಕ್ಕೂ ಮಾಡತಕ್ಕದ್ದು ಇದೆಯೇ ವಿನಹ ಇವರು ಮುಖ್ಯಮಂತ್ರಿಗಳು ಮಾಡಿದಂತಹ ನಿರ್ಣಯಕ್ಕೆ ವಿರುದ್ಧವಾಗಿರತಕ್ಕ ಪ್ರಶ್ನೆ ಇಲ್ಲಿ ಬರುವುದಿಲ್ಲ ಬೇರೆ ಜನಾಂಗದವರನ್ನು ಸೇರಿಸಬೇಕು ಎನ್ನತಕ್ಕ ಮಾತನ್ನು ಮಾನ್ಯ ಕಾರಜೋಳ ಹಾಗೂ ಮಾನ್ಯ ಆಂಜನೇಯ ಅವರು ಪ್ರಸ್ತಾಪ ಮಾಡಿದ್ದೀರಿ. ಇದರ ಇಡೀ ಹೋರಾಟದ ಜೀವಸತ್ವವೇ ಇರತಕ್ಕದ್ದು–ಸಮಾನತೆಯ ದೃಷ್ಟಿಕೋನದಿಂದ. ಆದ್ದರಿಂದ ಇವತ್ತಿನ ಆಧುನಿಕ ಮನಸ್ಸು ಸಮಾನತೆಯನ್ನು ಬಯಸುತ್ತದೆ. ಆ ಸಮಾನತೆಯನ್ನು ಬಯಸುವಂತಹದನ್ನೇ 12ನೇ ಶತಮಾನದಲ್ಲಿ ಅವರು ಮಾಡಿಕೊಟ್ಟಿರತಕ್ಕ ಕಾರಣ ಆಗಿರುವುದರಿಂದ ನಮ್ಮಲ್ಲಿ ನೇರವಾಗಿ ನಿಯಮಾವಳಿಯನ್ನು ರಚನೆ ಮಾಡತಕ್ಕ ಸಂದರ್ಭದಲ್ಲಿ ಆ ಇಬ್ಬರೂ ಕೊಟ್ಟಿರತಕ್ಕಂಥ ಸಲಹೆಯಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದಲ್ಲಿರತಕ್ಕ ಒಬ್ಬ ಮಹಿಳೆ ಮತ್ತು ಒಬ್ಬ ಹಿಂದುಳಿದ ಜನಾಂಗದವರು: ಅಲ್ಲಿ 5 ಜನರಲ್ಲಿ ಕಡ್ಡಾಯವಾಗಿ ಆಗಿರಲೇಬೇಕು ಎನ್ನತಕ್ಕ ನಿಯಮವನ್ನು ರಚನೆ ಮಾಡಬೇಕು ಎಂದು ಹೇಳಿ ಈ ಸದನದಲ್ಲಿ ನಾನು ಆಶ್ವಾಸನೆಯನ್ನು ಕೊಡುತ್ತೇನೆ. ಇಲ್ಲಿ ಮಾನ್ಯ ರಾಯರೆಡ್ಡಿಯವರು ಅಖಿಲ ಭಾರತ ವೀರಶೈವ ಮಹಾ ಸಭಾ ಮತ್ತು ಬಸವ ಸಮಿತಿ – ಇಲ್ಲಿ ಏಕೆ ಜಾತಿ ಸೂಚಕವಾಗಿರುವುದನ್ನು ತೆಗೆದುಕೊಂಡಿದ್ದಾರೆ ಎಂದರು ಅವರು ಈ ವಿಚಾರದಲ್ಲಿ ಕಾಲಕಾಲಕ್ಕೆ ಯುಕ್ತವಾದಂತಹ ಸಲಹೆಗಳನ್ನುಕೊಡಬಹುದು. ಅವರು ಈ ವಿಚಾರದಲ್ಲಿ ಮಾಡಿರತಕ್ಕ ಪ್ರಗತಿ ಏನು ಮಾಡಿದ್ದಾರೆ? ಮಾನ್ಯ ವಾಟಾಳ್ ನಾಗರಾಜ್ ಅವರು ಪ್ರಸ್ತಾಪ ಮಾಡಿದಂತೆ 600 ವರ್ಷದ 800 ವರ್ಷದ ಶತಮಾನೋತ್ಸವ ಸಮಾರಂಭಕ್ಕೆ ಶ್ರೀ ಬಿ.ಡಿ ಜತ್ತಿಯವರೇ ಆ ಬಸವ ಸಮಿತಿಯ ಅಧ್ಯಕ್ಷರಾಗಿದ್ದರು ಆ ಕಾಲದಲ್ಲಿ ಅನುಭವ ಮಂಟಪವನ್ನು ಕಟ್ಟಿದ್ದರು. ಜಯದೇವಿ ತಾಯಿಲಿಂಗಾಡೆಯವರೂ ಅಲ್ಲಿ ತಮ್ಮ ಸಮಾಧಿಯನ್ನು ಮಾಡಿಕೊಂಡು ಅಲ್ಲಿ ಅವರು ಬರೆದಿರತಕ್ಕಂಥ ಮಹಾ ಕಾವ್ಯ ಇರತಕ್ಕದ್ದು ಇದೆ. ಅದರ ಜೊತೆಗೆ ಆ ಮಠ ಮಾನ್ಯಗಳ ಜೊತೆಗೆ ಭಾಲ್ಕಿಯ ಪಟ್ಟದ ದೇವರು. ಬಹಳ ದೊಡ್ಡ ಪರಿಣಾಮಕಾರಿಯಾದಂತಹ ಕೆಲಸವನ್ನು ಆ ಭಾಗದಲ್ಲಿ ಮಾಡಿರ–ತಕ್ಕದ್ದು ಇರುವುದರಿಂದ ಇವರನ್ನು ಪ್ರಾತಿನಿಧಿಕ ಸ್ವರೂಪವಾಗಿ ಅವರು ಮಾಡಿರತಕ್ಕಂಥ ಸಂಶೋಧನೆಗಳು ಕಾಲಕಾಲಕ್ಕೆ ಪ್ರಕಟಿಸಿದಂತಹ ಪುಸ್ತಕಗಳು ಸಂಶೋಧನೆಗಳು ಮತ್ತು ಅದಕ್ಕೆ ಸಂಬಂಧಪಟ್ಟಂತಹ ಸ್ವರ ವಚನಕ್ಕೆ ರಾಗವನ್ನು ಹಾಕಿರತಕ್ಕದ್ದು ಶಾಂತಿ ಅರಸರಿಗೆ ಸಂಬಂಧಪಟ್ಟವರೂ ಇದ್ದರು ಬಸವಣ್ಣನವರ ದೊಡ್ಡ ಕ್ರಾಂತಿಯ ಮುಖ್ಯ ಉದ್ದೇಶವೂ ಕೂಡ ಅಲ್ಲಿ ಇಂತಹ ವಿಚಾರಗಳನ್ನು ಪ್ರಸ್ತಾಪ ಮಾಡಿದಾಗ ಅವನ್ನು ಆ ಕೂಡಲೇ

ಬರೆದು ಇಡತಕ್ಕಂಥ ಒಂದು ಸಂಪ್ರದಾಯ ಇತ್ತು ಆ ಬರೆದು ಇಡತಕ್ಕಂಥ ಸಂಪ್ರದಾಯನಿಗೆ ಆತ ಒಬ್ಬ ಲೈಬ್ರೇರಿಯನ್ ಎಂದು ನಾವು ಕರೆಯಬಹುದು ಗ್ರಂಥ ಪಾಲಕ ಅಥವಾ ಭಂಡಾರಿ ಶಾಂತ ಅರಸ ಎಂಬ ಒಬ್ಬ ಶರಣ ಇದ್ದ ಆ ಶಾಂತ ಅರಸನೇ ಭಂಡಾರಿಯಾಗಿ ಆ ವಚನಗಳನ್ನೆಲ್ಲಾ ಕಾಪಾಡಿಕೊಂಡಿದ್ದ ಮುಂದೆ ಅದು ವಿಪ್ಲವಕ್ಕೆ ಒಳಪಟ್ಟಿರತಕ್ಕಂಥ ಸಂದರ್ಭದಲ್ಲಿ ಅವುಗಳ ಹಸ್ತಪ್ರತಿಗಳೆಲ್ಲವನ್ನೂ ಕೂಡ ಉಳಿವಿಯ ಭಾಗಕ್ಕೆ ಕೆಲವು ಕಡೆಗೆ ಕಳಿಸಿಕೊಟ್ಟು ಚೌಡಯ್ಯ ದಾನಿಪುರ ಎಂದು ಹೇಳಿ ರಾಣಿ ಬೆನ್ನೂರು ತಾಲ್ಲೂಕಿನ ಶಿವಪುರದಲ್ಲಿರತಕ್ಕ ಕೆಲವು ಕಡೆ ಕಳಿಸಿಕೊಟ್ಟು ಉಳಿದಿರತಕ್ಕದ್ದು ಎರಡನೇ ಪ್ರಭುದೇವರ ಕಾಲದಲ್ಲಿ 14ನೇ ಶತಮಾನದಲ್ಲಿ 1420ರಲ್ಲಿ ವಿಜಯನಗರದ ಅರಸರ ಕಾಲದಲ್ಲಿ ಬಂದಿರತಕ್ಕಂಥದ್ದು ಕೂಡ ಇದೆ. ಆದುದರಿಂದ ಇವೆಲ್ಲವನ್ನೂ ಸಂರಕ್ಷಿಸಬೇಕೆಂಬ ಉದ್ದೇಶದಿಂದ ವಿಧೇಯಕದಲ್ಲಿ ತಂದಿದ್ದೇವೆ. ಮತ್ತೆ ಮಾನ್ಯ ಸದಸ್ಯರಾದ ವಿಶ್ವೇಶ್ವರ ಹೆಗಡೆ ಕಾಗೇರಿಯವರು ಪ್ರಸ್ತಾಪಿಸುತ್ತಾ ಬನವಾಸಿಯ ಮಧುಕೇಶ್ವರ ದೇವಾಲಯ ಮೊದಲಾದ ಐತಿಹಾಸಿಕ ಪ್ರದೇಶಗಳು ಮತ್ತು ಅಲ್ಲಮಪ್ರಭು ಕೂಡ ಬನವಾಸಿ ಪ್ರದೇಶದಿಂದ ಬಂದಿರುವ ಕಾರಣಕ್ಕಾಗಿ ತಾವು ಅಲ್ಲಿನ ಪ್ರದೇಶಗಳ ಬಗ್ಗೆ ಹೆಚ್ಚು ಮಹತ್ವ ಕೊಡಬೇಕಾಗುತ್ತದೆ ಎಂದು ಹೇಳಿದ್ದಾರೆ ಹಾಗೆ ನೋಡಿದರೆ ಇಡೀ ಭಾರತ ದೇಶ ಮತ್ತು ಕರ್ನಾಟಕದಲ್ಲಿ ಇಂತಹ ಐತಿಹಾಸಿಕವಾಗಿರುವ ಅನೇಕ ಪ್ರಸಿದ್ಧ ಸ್ಥಳಗಳಿವೆ. ಈಗ ಅಮೆರಿಕಾದಂತಹ ದೇಶಕ್ಕೆ ಕೇವಲ ಮುನ್ನೂರು ವರ್ಷಗಳಷ್ಟು ಇತಿಹಾಸವಿದೆ. ಅಲ್ಲಿನ ವಾಷಿಂಗ್‌ಟನ್‌ನಲ್ಲಿ ಬಿದ್ದಿರುವ ಒಂದು ಕೋಟೆ ಐತಿಹಾಸಿಕ ಸ್ಮಾರಕವಾಗಿ ಪರಿವರ್ತನೆಗೊಳ್ಳುತ್ತದೆ. ಇಲ್ಲಿ ನೂರಾರು ಅಲ್ಲ, ಸಾವಿರಾರು ಇಂತಹ ಐತಿಹಾಸಿಕ ಪ್ರದೇಶಗಳಿವೆ. ತಾವು ಹೇಳಿದಂತೆ ಇಷ್ಟು ದಿವಸಗಳ ನಂತಹ ಕೂಡಲಸಂಗಮದ ಅಭಿವೃದ್ಧಿ ಜೊತೆಗೆ ಬಸವಕಲ್ಯಾಣ ಅಭಿವೃದ್ಧಿ ಪ್ರಾಧಿಕಾರವೂ ಅಸ್ತಿತ್ವಕ್ಕೆ ಬರುತ್ತಿದೆ. ವಿಜಯನಗರದ ಅರಸರ ಕಾಲದಲ್ಲಿ ದಾಸ ಪರಂಪರೆಗೆ ಸೇರಿದ ಒಬ್ಬ ದೊಡ್ಡ ದಂಡನಾಯಕ, ಪಾಳೆಗಾರರಾಗಿ ಕೆಲಸ ಮಾಡಿರುವ ಕಾಗಿನೆಲೆಯ ಕನಕದಾಸರ ಬಗ್ಗೆ ಕೂಡ ಪ್ರಾಧಿಕಾರವೊಂದನ್ನು ಅಸ್ತಿತ್ವಕ್ಕೆ ತರುವ ದಿಸೆಯಲ್ಲಿ ಇನ್ನು ಸ್ವಲ್ಪ ದಿವಸಗಳಲ್ಲಿ ಪ್ರಸಕ್ತ ಸಾಲಿನ ಆಯವ್ಯಯದಲ್ಲಿ ಪ್ರಕಟಿಸುವಂತೆ ಪ್ರಯತ್ನ ಮಾಡುತ್ತಿದ್ದೇವೆ. ಆದುದರಿಂದ ಮುಂದೆ ಇವೆಲ್ಲವನ್ನೂ ಅಭಿವೃದ್ಧಿಪಡಿಸುವುದಕ್ಕೆ ಅಗತ್ಯವಾಗಿರುವ ಕೆಲಸ-ಕಾರ್ಯಗಳನ್ನು ಪ್ರವಾಸೋದ್ಯಮ ಮತ್ತು ಪುರಾತತ್ವ ಇಲಾಖೆಗಳ ವತಿಯಿಂದ ಮಾಡಿಸಲಾಗುತ್ತಿದೆ. ನಿಮಗೆ ಗೊತ್ತಿರುವಂತೆ ಸೂರ್ಯವಂಶ ರಾಜರ ಒಂದು ಕೆತ್ತನೆ ಕೆಲಸ ಮತ್ತು ಅಲ್ಲಿದ್ದ ಸೂರ್ಯವಂಶದ ಅರಸರು ಮತ್ತು ಬೇರೆಡೆ ಇರುವ ಕೆಳದಿಯ

ಅರಸರು–ಇವುಗಳಿಗೆ ಸಂಬಂಧಿಸಿದಂತೆ ಬೇರೆ ಬೇರೆ ಟ್ರಸ್ಟ್‌ಗಳಿದ್ದು ಕಾರ್ಯನಿರ್ವಹಿಸುತ್ತವೆ. ಮುಂದೆ ಅಂತಹ ಸಂದರ್ಭ ಬಂದಾಗ ತಮ್ಮ ಈ ಸಲಹೆಯನ್ನು ಕೂಡ ನಾವು ಖಂಡಿತವಾಗಿಯೂ ಕಾರ್ಯರೂಪಕ್ಕೆ ತರಬಹುದೆಂಬ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತಾ ಇಲ್ಲಿ ಹಣಕಾಸನ್ನು ಒದಗಿಸಿಕೊಡಬೇಕೆಂಬ ಮಾತೇನಿದೆ, ಡೊನೇಶನ್ ಕೊಡುವುದಕ್ಕೆ ಇಲ್ಲಿ ಅವಕಾಶವಿದೆ. ಅದನ್ನೂ ಇಲ್ಲಿ ಪ್ರಸ್ತಾಪಿಸಲಾಗಿದೆ.

"31. ಮಂಡಳಿಯ ನಿಧಿ–(1) ಬಸವಕಲ್ಯಾಣ ಅಭಿವೃದ್ಧಿ ಮಂಡಳಿ ನಿಧಿಯೆಂದು ಕರೆಯಲಾಗುವ ಒಂದು ನಿಧಿಯು ಇರತಕ್ಕದ್ದು

(2) ಸದರಿ ನಿಧಿಗೆ,–

(1) ಕೇಂದ್ರ ಸರ್ಕಾರ ರಾಜ್ಯ ಸರ್ಕಾರ ಯಾವುದೇ ಸ್ಥಳೀಯ ಪ್ರಾಧಿಕಾರ ಅಥವಾ ನಿಗಮಿತವಾದ ಇಲ್ಲವೇ ನಿಗಮಿತವಲ್ಲದ ಯಾವುದೇ ನಿಕಾಯ ಅಥವಾಯಾವೊಬ್ಬ ವ್ಯಕ್ತಿಯ ನೀಡಿದ ಎಲ್ಲ ಅನುದಾನಗಳು, ಧನ ಸಹಾಯ ದೇಣಿಗೆಗಳು ಮತ್ತು ದಾನಗಳನ್ನು;

(2) ಮಂಡಳಿಯು ಸಾಲ ಪಡೆದ ಮೊಬಲಗನ್ನು; ಮತ್ತು

(3) ಯಾವುದೇ ಮೂಲದಿಂದಾಗಲಿ ಮಂಡಳಿಯು ಅಥವಾ ಮಂಡಳಿಯ ಪರವಾಗಿ ಪಡೆದುಕೊಂಡ ಇತರೆ ಎಲ್ಲ ಮೊತ್ತಗಳನ್ನು ಜಮೆ ಮಾಡತಕ್ಕದ್ದು".

ಎಂದು ಹೇಳಲಾಗಿದೆ ಅದಕ್ಕೆ ಲಭ್ಯವಾಗಿರುವ concession ಏನಿದೆ, ಆದಾಯ ತೆರಿಗೆ ಮೂಲಕ ವಿಧಿಸತಕ್ಕ ನಫೆ ಅದಕ್ಕೆ ಸಿಗುತ್ತದೆಂಬ ಮಾತನ್ನು ಕೂಡ ಇದರಲ್ಲಿ ಸೇರಿಸಲಾಗಿದೆ. ಜೊತೆಗೆ ಜನ್ಮಕೊಟ್ಟ ಸ್ಥಳವನ್ನೂ ಈಗಾಗಲೇ ಸೇರಿಸಲಾಗಿದೆ.

ಇನ್ನು ಕೂಡಲಸಂಗಮದ ಜೊತೆಗೆ ಬೇರೆಯದನ್ನೂ ಸೇರಿಸಬೇಕೆಂಬ ವಿಚಾರವನ್ನು ತಾವು ಪ್ರಸ್ತಾಪಿಸಿದ್ದೀರಿ. ಈಗ ಜನ್ಮಕೊಟ್ಟಿರುವ ಸ್ಥಳವೇನಿದೆ. ಇದನ್ನು ಈಗಾಗಲೇ ಕೂಡಲಸಂಗಮದ ಅಭಿವೃದ್ಧಿಗೆ ಸಂಬಂಧಿಸಿರುವ ಅಲ್ಲಿನ ಇಂಗಳೇಶ್ವರದಲ್ಲಿರುವುದನ್ನೂ ಸೇರಿಸಿದ್ದೇವೆ. ಮತ್ತು ಬಸವಕಲ್ಯಾಣದ ಜೊತೆಗೆ ಬಾಗೇವಾಡಿಯನ್ನೂ ತೆಗೆದುಕೊಂಡಿದ್ದೇವೆ. ಹಿರಿಯ ಶಾಸಕರಾದ ದೇಸಾಯಿ ಶಿವಪುತ್ರಪ್ಪ ಮಡಿವಾಳಪ್ಪನವರ ಕ್ಷೇತ್ರವೂ ಅದರಲ್ಲಿ ಒಳಗೊಳ್ಳುತ್ತದೆ. ಅವರು ಬಹಳ ಹೋರಾಟ ನಡೆಸಿದ ನಂತರ ಅಲ್ಲಿನ ಚಿಕ್ಕಸಂಗಮವನ್ನೂ ಸೇರಿಸಿಕೊಳ್ಳಲಾಗಿದೆ. ತಾವು ಅಲ್ಲಿ ಇನ್ನೊಂದು ಪ್ರಶ್ನೆಯನ್ನು ಪ್ರಸ್ತಾಪಿಸಿದ್ದೀರಿ. ಸೇಡಂನ

ಬೀರನಹಳ್ಳಿಯಲ್ಲಿ ಹರಳಯ್ಯನ ಚಮ್ಮಾವುಗೆ ಇದೆಎಂದು ತಾವು ತಿಳಿಸಿದ್ದೀರಿ. ಇಂತಹ ಬೇಕಾದಷ್ಟು ವಿಚಾರಗಳು ಪ್ರಸ್ತಾಪವಾಗುತ್ತವೆ. ಅವೆಲ್ಲವನ್ನೂ ಇದರಲ್ಲಿ ಸೇರಿಸಿಕೊಳ್ಳುವುದು ಕಷ್ಟವಾಗುತ್ತದೆ. ಸುಮಾರು 120 ಕಿಲೋಮೀಟರ್‌ಗಳಷ್ಟು ದೂರದಲ್ಲಿರುವ ಚಮ್ಮಾವುಗೆ ಕುರಿತಂತೆ ಸಿದ್ದರಾಮೇಶ್ವರ ತನ್ನ ವಚನದಲ್ಲಿ ಹೀಗೆ ಹೇಳುತ್ತಾನೆಃ ಕ್ರಿಯೆ ನಿಮ್ಮ ಎಡಪಾದ ಕ್ರಿಯೆ ನಿಮ್ಮ ಬಲಪಾದ ಸಾಕ್ಷಾತ್ ಕಪಿಲಸಿದ್ದ ಮಲ್ಲಿಕಾರ್ಜುನ ನಿಮ್ಮ ಚಮ್ಮಾವುಗೆ ಆದುದರಿಂದ ಚಮ್ಮಾವುಗೆ ಎನ್ನುವುದನ್ನು ಕೊನೆಯಲ್ಲೂ ಪ್ರಸ್ತಾಪಿಸುತ್ತಾರೆ. ಈಗ ಮಲೈಮಹದೇಶ್ವರ ಬೆಟ್ಟದಲ್ಲೂ ಕೂಡ flaming feet ಇರುವುದು ಇವರಿಗೆಲ್ಲಾ ಗೊತ್ತಿದೆ. ಅದರ ಬಗ್ಗೆ ಒಂದು ಪುಸ್ತಕವೂ ಪ್ರಕಟವಾಗಿದೆ. ಅಲ್ಲಿಯೂ ಚಮ್ಮಾವುಗೆ ಪ್ರಸ್ತಾಪಗಳು ಬರುತ್ತವೆ. ಅಂದರೆ ಈ ಚಮ್ಮಾವುಗೆಯನ್ನು ಹರಳಯ್ಯನೇ ಮಾಡಿದ್ದು ಎನ್ನುವ ಮಾತನ್ನು ಶರಣರೇ ಹೇಳುತ್ತಾರೆ.

ಡಾ:ಶರಣ ಪ್ರಕಾಶ್ ರುದ್ರಪ್ಪ: ಅಲ್ಲಿ ಚಮ್ಮಾವುಗೆ ಪ್ರಸ್ತಾಪವಾಗಿರುವುದು ಅಷ್ಟೇ ಅಲ್ಲ 12ನೇ ಶತಮಾನದಲ್ಲಿ ಸಮಾಜಿಕ ಕ್ರಾಂತಿಗೆ ಕಾರಣವಾಗಿರುವುದು ಈ ಚಮ್ಮಾವುಗೆ. ಈ ಚಮ್ಮಾವುಗೆಯನ್ನು ಸ್ವತಃ ಹರಳಯ್ಯನವರೇ ತಮ್ಮ ದೇಹದ ಚರ್ಮದಿಂದ ಬಸವಣ್ಣನವರಿಗೋಸ್ಕರ ತಯಾರಿಸಿದ ಚಮ್ಮಾವುಗೆಯನ್ನು ಬಸವಣ್ಣನವರಿಗೆ ನೀಡಿದಾಗ ಬಸವಣ್ಣನವರು ಅದನ್ನು ತಲೆ ಮೇಲಿಟ್ಟುಕೊಂಡರು. 12ನೇ ಶತಮಾನದಲ್ಲಿದ್ದ ಬಸವಣ್ಣನವರ ಯಾವುದಾದರೂ ಅವಶೇಷಗಳು ಇಂದು ಜೀವಂತವಾಗಿದ್ದರೆ ಅದು ಈ ಚಮ್ಮಾವುಗೆಯಾಂದೇ ಎಂದು ಹೇಳಬೇಕಾಗುತ್ತದೆ. 12ನೇ ಶತಮಾನದಲ್ಲಿ ತಯಾರಿಸಿರುವ ಈ ಚಮ್ಮಾವುಗೆಯನ್ನು ಬಸವಣ್ಣನವರಿಗೋಸ್ಕರ ಹರಳಯ್ಯನವರು ತಮ್ಮ ಚರ್ಮದಿಂದಲೇ ಅಂದರೆ ಸ್ವತಃ ತಮ್ಮ ತೊಡೆಯ ಚರ್ಮವನ್ನು ಕಿತ್ತು ತಯಾರಿಸಿರುವ ಚಮ್ಮಾವುಗೆ ಇವೊತ್ತಿಗೂ ಇರುವುದರಿಂದ ಅದನ್ನು ರಕ್ಷಿಸುವ ಮೂಲಕ ಜನರಿಗೆ ತೋರಿಸಬೇಕು. ಏಕೆಂದರೆ 12ನೇ ಶತಮಾನದಲ್ಲಿ ಈ ವಿದ್ಯಮಾನ ಜರುಗಿರುವುದು ನಿಜ ಆ ಚಮ್ಮಾವುಗೆ ಇನ್ನೂ ಇದೆಯೆಂಬ ನಿದರ್ಶನವನ್ನು ನಾವು ತೋರಿಸಬೇಕಾಗಿದೆ. ಇದನ್ನು ಮಾನ್ಯ ಸಚಿವರಾಗಿರುವ ತಾವು ಪ್ರಸ್ತಾಪಿಸಬೇಕಾಗುತ್ತದೆ.

ಶ್ರೀ ಬಿ. ಎಸ್. ಯಡಿಯೂರಪ್ಪಃ ಅದರ ಬಗ್ಗೆ ಪರಿಶೀಲನೆ ಮಾಡಿ ನೋಡಿ ಅದು ಸೀಮಿತವಾದ ವಿಧೇಯಕವೆಂದು ಅದರ ಬಗ್ಗೆ ಹೆಚ್ಚು ಪ್ರಸ್ತಾಪಿಸುವುದಕ್ಕೆ ನಾನು

ಹೋಗಲಿಲ್ಲ ಈಗ ಅಕ್ಕಮಹಾದೇವಿಯ ಜನ್ಮಸ್ಥಾನವಾದ ಉಡುತಡಿ ಅಲ್ಲಮಪ್ರಭು ಅನಿಮಿಷರಾಯರು ಬಳ್ಳಿಗಾವೆ ಇವೆಲ್ಲವನ್ನೂ ನೀವು ಅಭಿವೃದ್ಧಿಪಡಿಸಲು ವಿಧೇಯಕದಲ್ಲಿ ಸೇರಿಸದಿದ್ದರೆ ಮತ್ತೊಮ್ಮೆ ಅದಕ್ಕೆ ಪ್ರತ್ಯೇಕವಾಗಿ ಪ್ರಾಧಿಕಾರ ರಚಿಸಬೇಕೆಂದು ಅಥವಾ ಹಣ ಕೊಡಿ ಎಂದು ಕೇಳಲು ಸಾಧ್ಯವಾಗುವುದಿಲ್ಲ ಅದಕ್ಕೋಸ್ಕರ ಇತ್ತೀಚೆಗೆ ಮಾನ್ಯ ಮುಖ್ಯಮಂತ್ರಿಗಳು ಶಿವಮೊಗ್ಗಕ್ಕೆ ಬಂದಿದ್ದಾಗ ಅವರಿಗೆ ಮನವಿಯೊಂದನ್ನು ಸಲ್ಲಿಸಿದ ಸಂದರ್ಭದಲ್ಲಿ ಆ ಕುರಿತು ಪರಿಶೀಲಿಸುವುದಾಗಿ ಸಭೆಯಲ್ಲಿ ಆಶ್ವಾಸನೆ ಕೊಟ್ಟರು ಬಸವಣ್ಣನವರಿಗೆ ಸಂಬಂಧಿಸಿದ ಅನುಭವ ಮಂಟಪದಲ್ಲಿ ಇವರೆಲ್ಲರೂ ಪ್ರಮುಖ ಪಾತ್ರಧಾರಿಗಳಾಗಿದ್ದವರು. ಶಿಕಾರಿಪುರ ತಾಲ್ಲೂಕಿನಲ್ಲಿರುವ ಉಡುತಡಿ ಕೂಡ ಐತಿಹಾಸಿಕ ಸ್ಥಳವಾಗಿದೆ. ಇವೆಲ್ಲದರ ಅಭಿವೃದ್ಧಿಗಾಗಿ ಸದರಿ ಪ್ರಾಧಿಕಾರದಲ್ಲಿ ಸೇರಿಸಿಕೊಂಡರೆ ಇದಕ್ಕೋಸ್ಕರ ನಾವು ಮತ್ತೊಮ್ಮೆ ಪ್ರತ್ಯೇಕವಾಗಿ ಕೇಳಬೇಕಾದ ಪರಿಸ್ಥಿತಿ ಉದ್ಭವವಾಗುವುದಿಲ್ಲವೆಂದು ಅನಿಸುತ್ತದೆ. ಆ ಕಾರಣಕ್ಕಾಗಿ ಇದನ್ನು ಮತ್ತೊಮ್ಮೆ ಪರಿಶೀಲಿಸುವುದೊಳ್ಳೆಯದು.

ಶ್ರೀ ಎಂ.ಪಿ. ಪ್ರಕಾಶ್: ಸನ್ಮಾನ್ಯ ಅಧ್ಯಕ್ಷರೆ, ಇಲ್ಲಿ ಮಾನ್ಯ ಸದಸ್ಯರು ಪ್ರಸ್ತಾಪಿಸಿರುವ ಸಲಹೆಗಳೆಲ್ಲವೂ ಬಹಳ ಯೋಗ್ಯವಾಗಿವೆ. ಆದರೆ ಅದಕ್ಕೊಂದು ಭೌಗೋಳಿಕ ಮಿತಿ ಹಾಕಿಕೊಂಡಿರುವ ಕಾರಣ ನಾವು ಸೇಡಂ ತಾಲ್ಲೂಕಿನ ಊರನ್ನಾಗಲಿ, ಶಿವಮೊಗ್ಗದಲ್ಲಿರುವ ಉಡುತಡಿ ಮೊದಲಾಗಿ ಇರುವುದೆಲ್ಲದರ ಅಭಿವೃದ್ಧಿಗಾಗಿ ಪ್ರತ್ಯೇಕ ಹಣಕಾಸು ಮೀಸಲಿಟ್ಟು ಅವುಗಳನ್ನು ಅಭಿವೃದ್ಧಿಪಡಿಸಬೇಕೇ ವಿನಾ ಈಗ ನಿಗದಿಪಡಿಸಿರುವ ಹಣಕಾಸಿನಿಂದ ಅವುಗಳನ್ನು ಅಭಿವೃದ್ಧಿಪಡಿಸುವುದಕ್ಕಾಗುವುದಿಲ್ಲ. ತಾವು ನೀಡಿರುವ ಸಲಹೆ ಉತ್ತಮವಾಗಿದೆ. ಬಳ್ಳಿಗಾವೆ ಆಗಬಹುದು, ಉಡುತಡಿ ಆಗಬಹುದು, ಇವೆಲ್ಲವನ್ನೂ ಪ್ರವಾಸೋದ್ಯಮ ಅಥವಾ ಮಜರಾಯಿ ಇಲಾಖೆಯಿಂದ ಅಥವಾ ಜಿಲ್ಲಾ ಪಂಚಾಯಿತಿಗಳ ವತಿಯಿಂದ ಅಭಿವೃದ್ಧಿಪಡಿಸಬೇಕಾಗುತ್ತದೆ. ಆದರೆ ಈ ಎಲ್ಲಾ ವಿಚಾರಗಳನ್ನೂ ನಮ್ಮ ಈ ವ್ಯಾಪಕವಾದ ಕೇಂದ್ರದಲ್ಲಿ ಪ್ರಸ್ತಾಪಿಸಲ್ಪಡುತ್ತದೆ. ಈ ಕಾರಣಕ್ಕಾಗಿ ತಾವು ಹೇಳಿದಂತೆ ಚಮ್ಮಾವುಗೆಯಿಂದಲೇ ಅಲ್ಲಿ ಕ್ರಾಂತಿಯಾಯಿತೆಂದಲ್ಲ ಹರಳಯ್ಯನವರು ಭಕ್ತಿ-ಭಾವದಿಂದ ತಮ್ಮ ಮೈ ಚರ್ಮದಿಂದಲೇ ಪಾದರಕ್ಷೆ ಮಾಡಿಕೊಟ್ಟರು ಆದರೆ ಅಲ್ಲಿ ಬೇರೆ ಕಾರಣದಿಂದ ವಿಪ್ಲವವುಂಟಾಯಿತು ಅದರ ಬಗ್ಗೆ ತಮ್ಮ ವಚನದಲ್ಲಿ "ವೇದ ನಡುನಡುಗಿತು ಸಾಕ್ಷಾತ್ ಕೂಡಲಸಂಗಮ ಮಾದಾರ ಚನ್ನಯ್ಯನ ಮನೆಯಲ್ಲಿ ಉಂಡ ಕಾರಣಕ್ಕಾಗಿ" ಎಂದು ಒಂದೆಡೆ

ಹೇಳುತ್ತಾರೆ. ಆದುದರಿಂದ ಅಲ್ಲಿ ವರ್ಣಸಂಕರವಾಗುವ ರೀತಿಯಲ್ಲಿ ಎಲ್ಲರೂ ಮಾದಾರ ಚನ್ನಯ್ಯನ ಮನೆಯಲ್ಲಿ ಊಟ ಮಾಡಿದರು ಎನ್ನುವ ಕಾರಣಕ್ಕಾಗಿ ಸ್ಥಾಪಿತ ಹಿತಾಸಕ್ತಿಗಳು ವ್ಯತ್ಯಾಸ ಮಾಡಿದ್ದರಿಂದ ಅಲ್ಲಿ ವಿಪ್ಲವಕ್ಕೆ ನಾಂದಿಯಾಯಿತೇ ವಿನಾ ಭಕ್ತಿ-ಭಾವದಿಂದ ಅರ್ಪಿಸಿದ ಪಾದರಕ್ಷೆಯಿಂದಲ್ಲ ಆದರೆ ಭಕ್ತಿ-ಭಾವದಿಂದ ಅರ್ಪಿಸಿದ ಪಾದರಕ್ಷೆಗಳನ್ನು ಕಾಪಾಡುವ ಜವಾಬ್ದಾರಿ ನಮ್ಮ ಮೇಲಿದೆ. ಆ ವಿಚಾರದಲ್ಲಿ ಕ್ರಮ ಕೈಗೊಳ್ಳುತ್ತೇವೆ.

ಇದರಲ್ಲಿ ಎರಡೂವರೆ ಕೋಟಿ ರೂಪಾಯಿಗಳನ್ನು ನಿಗದಿಪಡಿಸಿದ್ದು ಬಸವನ ಬಾಗೇವಾಡಿಯಲ್ಲಿ ರಸ್ತೆ ಸಭಾ ಮಂಟಪಗಳು ಮುಂತಾದ ಬೃಹತ್ ಪ್ರಮಾಣದ ಅಭಿವೃದ್ಧಿ ಕಾರ್ಯಗಳನ್ನು ಕೈಗೊಂಡು ಪ್ರಾರಂಭಿಸಲಾಗಿದೆ. ಅದರಲ್ಲಿ ಜನ್ಮಸ್ಥಳವನ್ನೂ ಕೂಡ ಅಭಿವೃದ್ಧಿಪಡಿಸಲು ಸೇರಿಸಿಕೊಳ್ಳಬೇಕೆಂದು ಮಾನ್ಯ ಸದಸ್ಯರು ಪ್ರಸ್ತಾಪಿಸಿದ್ದಾರೆ ಇಷ್ಟು ಹಣದಲ್ಲಿ ಬಸವನ ಬಾಗೇವಾಡಿಯಲ್ಲಿ ಬಸವ ಸ್ಮಾರಕ ಭವನ, ಬಸವ ಉದ್ಯಾನ, ಬಸವ ವೃತ್ತ, ರಸ್ತೆ ಅಗಲೀಕರಣ, ಮಹಾದ್ವಾರ ಸಭಾ ಮಂಟಪಗಳ ನಿರ್ಮಾಣ ಇನ್ನು ಮುಂತಾದ ಕೆಲಸ-ಕಾರ್ಯಗಳು ಅಭಿವೃದ್ಧಿ ಪಥದಲ್ಲಿ ಸಾಗಿವೆ. ಆದುದರಿಂದ ತಾವೆಲ್ಲರೂ ನೀಡಿರುವ ಸಲಹೆಗಳೆಲ್ಲವನ್ನೂ ಗಮನದಲ್ಲಿಟ್ಟುಕೊಂಡು, ಸದಸ್ಯರುಗಳಲ್ಲಿ ಕಡ್ಡಾಯವಾಗಿ ಪರಿಶಿಷ್ಟ ಜಾತಿ ಮತ್ತು ಪಂಗಡದ ಒಬ್ಬ ಮಹಿಳೆ ಮತ್ತು ಹಿಂದುಳಿದ ಜನಾಂಗದವರೂ ಸಹ ಇರುವಂತೆ ನಿಮಾವಳಿಯಲ್ಲಿ ಸೇರಿಸಿ ಅವರನ್ನೂ ಸದಸ್ಯರನ್ನಾಗಿ ನೇಮಿಸಿರುತ್ತೇವೆ. ಆದಕಾರಣ ತಾವೆಲ್ಲರೂ ಇದನ್ನು ಸ್ವಾಗತಿಸಿರುವುದಕ್ಕೆ ತಮಗೆಲ್ಲರಿಗೂ ಧನ್ಯವಾದಗಳನ್ನರ್ಪಿಸುತ್ತೇನೆ.

ಶ್ರೀ ಜೆ.ಸಿ. ಮಾಧುಸ್ವಾಮಿಃ ಕಮೀಷನರ್ ಬಗ್ಗೆ ನಾನು ಪ್ರಸ್ತಾಪಿಸಿದೆ ಅಲ್ಲಿಗೊಬ್ಬರು ಕಮೀಷನರ್ ನೇಮಕವಾಗುತ್ತಾರೆಂಬ ದೃಷ್ಟಿಯಿಂದ ಈ ಶಾಸನ ರಚನೆಯಾಗಿದೆ ಏಕೆಂದರೆ ವಿಧೇಯಕದ 15ನೇ ಪುಟದಲ್ಲಿರುವ ಅಧ್ಯಾಯ 4ರಲ್ಲಿ "ಹಣಕಾಸು ಮತ್ತು ಸ್ವತ್ತು" ಶೀರ್ಷಿಕೆಯ ನಾಲ್ಕನೆಯ ವಿಧಿಯನ್ನು ತಾವು ಗಮನಿಸಬೇಕು "(4) ಮಂಡಳಿಯ ಆಯುಕ್ತರಿಗೆ ಮತ್ತು ಇತರ ಅಧಿಕಾರಿಗಳಿಗೆ ಮತ್ತು ನೌಕರರಿಗೆ ಸಂದಾಯ ಮಾಡಬೇಕಾದ ವೇತನಗಳು ಮತ್ತು ಭತ್ಯೆಗಳು ಮತ್ತು ನಿವೃತ್ತಿ ವೇತನವೇನಾದರೂ ಇದ್ದಲ್ಲಿ ಅದನ್ನೂ ಒಳಗೊಂಡಂತೆ ಮಂಡಳಿಯ ಆಡಳಿತಾತ್ಮಕ ವೆಚ್ಚಗಳನ್ನು ಮಂಡಳಿಯ ನಿಧಿಯಿಂದ ಭರಿಸತಕ್ಕದ್ದು" ಎಂದು ನಮೂದಿಸಲಾಗಿದೆ. ಸಂಬಳ ಮತ್ತು ಭತ್ಯೆಯನ್ನು ಸದರಿ ನಿಧಿಯಿಂದ ಭರಿಸಿದರೆ ಅಭಿವೃದ್ಧಿ ಕೆಲಸ ಕಾರ್ಯಗಳಿಗೆ ತೊಂದರೆಯಾಗುತ್ತದೆ. ನಾನು ಈಗಲೂ ನಿಮ್ಮನ್ನು ಕೇಳುವುದೇನೆಂದರೆ ಎರವಲು ಸೇವೆ ಆಧಾರದ ಮೇಲೆ ಒಬ್ಬ ಸರ್ಕಾರಿ ನೌಕರರನ್ನು ನೇಮಿಸಿಕೊಂಡು

ನಿರ್ವಹಿಸುವುದು ಒಳ್ಳೆಯದೇ ಎಂಬುದನ್ನು ಯೋಚಿಸಬೇಕು. ನಿವೃತ್ತಿ ವೇತನವನ್ನೂ ಕೂಡ ನೀವು ಆ ಮಂಡಳಿಯ ಆಡಳಿತಾತ್ಮಕ ನಿಧಿಯಿಂದಲೇ ಕೊಡಬಹುದೆಂದು ವಿಧೇಯಕದಲ್ಲಿ ನಮೂದಿಸಿದರೆ ನಾಳೆ ನೀವು ಇದನ್ನು ಹೇಗೆ ಸರಿಪಡಿಸುತ್ತೀರಿ?

ಶ್ರೀ ಎಂ.ಪಿ. ಪ್ರಕಾಶ್: ಮಾನ್ಯ ಅಧ್ಯಕ್ಷರೆ ಇಂತಹ ಬೃಹತ್ ಪ್ರಮಾಣದಲ್ಲಿ ಅಭಿವೃದ್ಧಿ ಕೆಲಸ ಕಾರ್ಯಗಳನ್ನು ನಾವು ಕೈಗೊಂಡಿರುವ ಸಂದರ್ಭದಲ್ಲಿ ಅದಕ್ಕೆ ಖಾಯಂ ನೌಕರರನ್ನು ನೇಮಿಸುವ ಅಗತ್ಯವಿದೆ. ಆ ರೀತಿ ನೇಮಿಸಿದಾಗ ಅವರ ಜೀವನ ಭದ್ರತೆಯ ಪರಿಕಲ್ಪನೆಯಲ್ಲಿ ಅವರಿಗೆ ಪಿಂಚಣಿ ನೀಡಲಾಗುತ್ತದೆ. ಆದುದರಿಂದ ಅವರನ್ನು ನೇಮಿಸಿಕೊಳ್ಳುತ್ತೇವೆ. ಆದರೆ, ಸದಸ್ಯರಾದವರು ಟಿಎಃಡಿ.ಎ ತೆಗೆದುಕೊಳ್ಳುವುದು ಬೇಡವೆಂದರೆ ಬಿಡಬಹುದು. ನಾವು ಅನೇಕ ಸಂದರ್ಭಗಳಲ್ಲಿ ಪರಿಣಿತರನ್ನು ಕರೆಸುತ್ತೇವೆ. ಆಗ ಅದಕ್ಕೆ ಸಂಬಂಧಿಸಿದಂತೆ ವೆಚ್ಚ ಬರಬಹುದು.

ಶ್ರೀ ಬಸವರಾಜು ರಾಯರೆಡ್ಡಿ: ಮಾನ್ಯ ಸಚಿವರೆ, ನಾನು ತಮಗೊಂದು ಸಲಹೆ ನೀಡಿದೆ ತಾವು ಅದರ ಬಗ್ಗೆ ಪ್ರಸ್ತಾಪಿಸಲಿಲ್ಲ ಆಂಧ್ರಪ್ರದೇಶ ಮತ್ತು ಮಹಾರಾಷ್ಟ್ರ ರಾಜ್ಯದ ಪ್ರತಿನಿಧಿಗಳನ್ನೂ ಇದರಲ್ಲಿ ಸೇರಿಸಿಕೊಂಡರೆ ಇದಕ್ಕೊಂದು ಮಹತ್ವ ಬರುತ್ತದೆ. ಮಾನ್ಯ ಸಚಿವರೇ, ನಾನು ಎಲ್ಲೂ ಹೋಗಿರಲಿಲ್ಲ ಇಲ್ಲೇ ಇದ್ದೆ ನಾನೇನು ಹೇಳಿದೇ? ಆಂಧ್ರ ಪ್ರದೇಶ ಮತ್ತು ಮಹಾರಾಷ್ಟ್ರ ರಾಜ್ಯದ ಪ್ರತಿನಿಧಿಗಳನ್ನೂ ಕೂಡ ಇದರಲ್ಲಿ ಸೇರಿಸಿಕೊಂಡರೆ ಮಹತ್ವವಾಗುತ್ತದೆ. ಏಕೆಂದರೆ ಅವತ್ತು ಈ ಶರಣರ ಮೇಳದಲ್ಲಿ ಆಂಧ್ರ ಪ್ರದೇಶ, ಮಹಾರಾಷ್ಟ್ರದಿಂದ ಕೂಡ ಬಹಳಷ್ಟು ಶರಣರು ಅಲ್ಲಿಗೆ ಬಂದಿದ್ದಾರೆ. ಮತ್ತು ಇವತ್ತು ಕೂಡ ಈ ಸಿದ್ಧಾಂತದ ಬಗ್ಗೆ ಮಹಾರಾಷ್ಟ್ರ, ಆಂಧ್ರಪ್ರದೇಶ, ಪಕ್ಕದಲ್ಲಿರುವಂತಹ ರಾಜ್ಯಗಳಲ್ಲಿ ಜನ ಇದ್ದಾರೆ ಅದಕ್ಕೆ ಅಲ್ಲಿಯ ಪ್ರತಿನಿಧಿಗಳನ್ನು ಕೂಡ ತಾವು ಸೇರಿಸಬೇಕು ಎಂದು ನಾನು ಕೇಳಿದ್ದೆ. ದಯಮಾಡಿ ಅದರ ಬಗ್ಗೆ ಹೇಳಿ ಸಾಕು.

ಶ್ರೀ ಎಂ.ಪಿ. ಪ್ರಕಾಶ್ (ಮಾನ್ಯ ಕಂದಾಯ ಸಚಿವರು):- ಆಂಧ್ರಪ್ರದೇಶ, ಮಹಾರಾಷ್ಟ್ರ ಒಂದೇ ಅಲ್ಲ, ಕಾಶ್ಮೀರದ ರಾಜನೂ ಕೂಡ ಬಂದಿದ್ದ ನೇಪಾಳದವರೂ

ಬಂದಿದ್ದರು, ತಮಿಳುನಾಡಿನವರೂ ಬಂದಿದ್ದರು. ಅದಕ್ಕಾಗಿನೇ ಅಖಿಲ ಭಾರತ ವೀರಶೈವ ಮಹಾಸಭಾ ಇದರ ಒಂದು ಪ್ರಾತಿನಿಧಿಕ ಸ್ವರೂಪ ಆಗಿರುವುದರಿಂದ ಅವರು ಖಾಯಂ ಮಹಾನುವ್ಯಾಖ್ಯಾನದ ಸದಸ್ಯರಾಗಿರುತ್ತಾರೆ. ಅದರಿಂದ ಅವರು ಎಲ್ಲಾ ಯೋಚನೆಗಳಲ್ಲೂ ಪ್ರತಿನಿಧಿಸುತ್ತಾರೆ. ಅಖಿಲ ಭಾರತ ವೀರಶೈವ ಮಹಾ ಸಭೆ ಸೇರಿಸಿದ್ದು ತಾವು ಜಾತಿ ಕಾರಣಕ್ಕೆ ಎಂದು ಭಾವಿಸಿದಿರಿ. ಅದಲ್ಲ ಈ ಎಲ್ಲ ಕಾಶ್ಮೀರದಿಂದಲೂ ಬಂದಂತಹ ಜನಗಳನ್ನು ಅವರು ಪ್ರಾತಿನಿಧಿಕವಾಗಿ ಪ್ರತಿನಿಧಿಸುತ್ತಿರುವ ಕಾರಣಕ್ಕಾಗಿ ಅವರನ್ನು ಸೇರಿಸಿಕೊಂಡಿದ್ದೇವೆ.

ಬಸವ ಕಲ್ಯಾಣ ಅಭಿವೃದ್ಧಿ ಮಂಡಳಿ ವಿಧೇಯಕ, 2005

ಅಧ್ಯಕ್ಷರು :- ಪ್ರಸ್ತಾವ ಏನೆಂದರೆ :

"ಕರ್ನಾಟಕ ವಿಧಾನ ಪರಿಷತ್ತಿನಿಂದ ಅಂಗೀಕೃತವಾದ ರೂಪದಲ್ಲಿರುವ 2005ನೇ ಸಾಲಿನ ಬಸವ ಕಲ್ಯಾಣ ಅಭಿವೃದ್ಧಿ ಮಂಡಳಿ ವಿಧೇಯಕವನ್ನು ಪರ್ಯಾಲೋಚಿಸುವುದು".

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು

ಖಂಡ 2 ರಿಂದ 47ರವರೆಗೆ

ಅಧ್ಯಕ್ಷರು:- "ಖಂಡ 2ರಿಂದ 47ರವರೆಗೆ ಎರಡೂ ಸೇರಿದಂತೆ ಈ ವಿಧೇಯಕದ ಅಂಗವಾಗಿರುತ್ತದೆ".

ಪ್ರಸ್ತಾವ ಸಾರ್ವಮತದಿಂದ ಅಂಗೀಕರಿಸಲ್ಪಟ್ಟಿತು

(ಖಂಡ 2ರಿಂದ47ರವರೆಗೆ ಎರಡೂ ಸೇರಿದಂತೆ ವಿಧೇಯಕಕ್ಕೆ ಸೇರಿಸಲಾಯಿತು)

ಖಂಡ 1 ಇತ್ಯಾದಿ

ಅಧ್ಯಕ್ಷರು:- ಪ್ರಸ್ತಾವ ಏನೆಂದರೆ:

"ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ

ಸೂತ್ರ ಸಂಹಿತೆ, ವಿಧೇಯಕದ ಭಾಗವಾಗಿರುತ್ತದೆ".

ಪ್ರಸ್ತಾವ ಸರ್ವಾನುಮತದಿಂದ ಅಂಗೀಕರಿಸಲ್ಪಟ್ಟಿತ್ತು

(ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮ ಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲಾಯಿತು)

ಪ್ರಸ್ತಾವದ ಅಂಗೀಕಾರ

ಶ್ರೀ ಎಂ.ಪಿ. ಪ್ರಕಾಶ್ (ಮಾನ್ಯ ಕಂದಾಯ ಸಚಿವರು):– ಮಾನ್ಯ ಅಧ್ಯಕ್ಷರೆ ವಿಧಾನ ಪರಿಷತ್ತಿನಿಂದ ಅಂಗೀಕೃತ ರೂಪದಲ್ಲಿರುವ 2005ರ ಬಸವ ಕಲ್ಯಾಣ ಅಭಿವೃದ್ಧಿ ಮಂಡಳಿ ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

ಅಧ್ಯಕ್ಷರು:– ಪ್ರಸ್ತಾವ ಏನೆಂದರೆ:

"ವಿಧಾನ ಪರಿಷತ್ತಿನಿಂದ ಅಂಗೀಕೃತ ರೂಪದಲ್ಲಿರುವ 2005ರ ಬಸವ ಕಲ್ಯಾಣ ಅಭಿವೃದ್ಧಿ ಮಂಡಳಿ ವಿಧೇಯಕವನ್ನು ತಿದ್ದುಪಡಿ ಮಾಡಿರುವಂತೆ ಸರ್ವಾನುಮತದಿಂದ ಅಂಗೀಕರಿಸುವುದು".

ಪ್ರಸ್ತಾವ ಸರ್ವಾನುಮತದಿಂದ ಅಂಗೀಕರಿಸಲ್ಪಟ್ಟಿತ್ತು ಮತ್ತು ಮಸೂದೆಗೆ ಸರ್ವಾನುಮತದ ಒಪ್ಪಿಗೆ ನೀಡಲಾಯಿತು

ಅಧ್ಯಕ್ಷರು ಈಗ ಕೆಲವು ಮಹತ್ವವಾದ ವಿಷಯಗಳನ್ನು ಪ್ರಸ್ತಾಪ ಮಾಡಬೇಕು. ಕಾಲಾವಕಾಶ ಇದೆ ಎಂದು ಕೆಲವು ಸದಸ್ಯರು ಕೋರಿದ್ದಾರೆ. ಸಭೆ ಒಪ್ಪುವುದಾದರೆ ಮಾಡಬಹುದು.

ಶ್ರೀ ಬಿ.ಎಸ್. ಯಡಿಯೂರಪ್ಪ:– ಮಾಡಬಹುದು. ಜೀರೋ ಅವರ್ ವಿಚಾರ ಇದೆ.

ಶ್ರೀ ಜೆ.ಸಿ. ಮಾಧುಸ್ವಾಮಿ:– ಇದೊಂದು ಕೆಟ್ಟ ಸಂಪ್ರದಾಯ. ತಾವು ಒಪ್ಪುವುದಾದರೆ ಕರೆದು ಬಿಡಿ.

ಶ್ರೀ ವಾಟಾಳ್ ನಾಗರಾಜ್:– ಸಭೆಯನ್ನು ಕೇಳಬೇಡಿ.

ಶ್ರೀ ಜೆ.ಸಿ. ಮಾಧುಸ್ವಾಮಿ:– ಪ್ರತಿಸಲ ದಯಮಾಡಿ ತಾವು ಕೇಳಬೇಡಿ.